Sri K. S. SURYANARAYANA RAO.—At that stage, it was open to the Speaker to have disposed of the matter then and there and then allowed the discussion to go on, or declare the Bill as introduced. If our memories do not fail, it was left at that because, the Speaker to our hearing, did not announce that the Bill was introduced. Therefore, we take it that the objection was there and that it would be heard on the next day. Before the objection is heard and disposed of, if the debate is allowed to continue, it could be presumed that the Speaker has made up his mind not to allow the objection to be raised and therefore forestalling the opposition in this matter. And therefore Sir, if the Speaker has already made up his mind or if the Speaker is inclined to allow the Members to have their say, then no discussion can take place before deciding that matter.

Mr. SPEAKER.—It is a fine point of order that has been raised. It deals with the initiation or continuance of the debate on this Bill. I will look into the proceedings and it can be taken up a little later after the next Bill is over. Meantime, the next Bill may be taken up.

MYSORE MOTOR VEHICLES TAXATION (AMENDMENT) BILL, 1966.

Motion to consider.

Sri D. DEVARAJ URS (Minister for Labour and Transport).—Sir, I beg to move :

"That the Mysore Motor Vehicles Taxation (Amendment) Bill, 1966 be taken into consideration."

Mr. SPEAKER.—Motion moved :

"That the Mysore Motor Vehicles Taxation (Amendment) Bill, 1966, be taken into consideration."

†ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, 1966ರ ಷುರುವಿನಲ್ಲೇ ಒಂದು ತಿದ್ದುಪಡಿಯನ್ನು ಇಲ್ಲಿ ತಂದು ಗೂಡ್ಸ್ ವೆಹಿಕಲ್ಸ್‌ಗಳ ಮೇಲೆ ಇದ್ದಂತಹ ತೆರಿಗೆಯನ್ನು ಆಗ ಸ್ವಲ್ಪ ಹೆಚ್ಚಿಸಿದ್ದೆವು. ಆಗ ಹೆಚ್ಚಿಸಿದ ಕಾಲದಲ್ಲೇ 10,500 ಕೆ. ಜಿ. ಯಷ್ಟು ಹೊರೆ ಹೊತ್ತಿರುವ ಗೂಡ್ಸ್ ವೆಹಿಕಲ್ಸ್‌ಗಳು 800 ರೂಪಾಯಿಗಳಷ್ಟು ತೆರಿಗೆ ಕೊಡಬೇಕೆಂದು ಇತ್ತು. ನಮ್ಮ ಅನುಭವದಲ್ಲಿ ಈ ರೀತಿಮಾಡಿದು ದರಿಂದ ಸರಕಾರಕ್ಕೆ ಸ್ವಲ್ಪ ನಷ್ಟವಾಗುತ್ತದೆ. ಇತ್ತೀಚೆಗೆ ಬರುತ್ತಿರುವ ಗೂಡ್ಸ್ ವೆಹಿಕಲ್ಸ್‌ಗಳು ಬಹಳ ಉತ್ತಮ ರೀತಿಯಲ್ಲಿರುವುದರಿಂದ ಮತ್ತು ಹೆಚ್ಚು ಹೊರೆಯನ್ನು ತೆಗೆದುಕೊಂಡ ಹೋಗುತ್ತಿರುವುದರಿಂದ ಇದನ್ನು ನೂಕ್ತ ರೀತಿಯಲ್ಲಿ ಹೆಚ್ಚು ಮಾಡುವುದು ಸರಿಯಾಗಿದೆ ಎಂದು ಈ ಬಿಲ್ಲನ್ನು ತರಲಾಗಿದೆ. ಈಗ ಗೂಡ್ಸ್ ವೆಹಿಕಲ್ಸ್‌ಗಳು 12 ಸಾವಿರ, 13 ಸಾವಿರ 14 ಸಾವಿರ ಅಥವಾ 15 ಸಾವಿರ ಕೆ. ಜಿ. ಗಳಷ್ಟು ಹೊರೆಯನ್ನು ಹೊತ್ತುಕೊಂಡು ಹೋಗುತ್ತಿವೆ. ನಾವು ಇಲ್ಲಿಯವರೆಗೆ 10,500 ಕೆ. ಜಿ. ಗಳಷ್ಟು ತೂಕವಿರುವ ಗೂಡ್ಸ್ ವೆಹಿಕಲ್ಸ್‌ಗಳಿಗೆ ಕೇವಲ 800 ರೂಪಾಯಿಗಳನ್ನು ಮಾತ್ರ ವಸೂಲು ಮಾಡಿ ಹೆಚ್ಚಿಗೆ ಭಾರ ಇದ್ದರೆ ಅದರ ಮೇಲೆ ಹೆಚ್ಚು ತೆರಿಗೆ ತೆಗೆದುಕೊಳ್ಳಲು ಆಗುತ್ತಿಲ್ಲ. ಹಾಗೆ ತೆಗೆದುಕೊಳ್ಳಲು ಕೆಲವು ಅನಾನುಕೂಲಗಳೂ ಇದ್ದವು. ಈ ದೃಷ್ಟಿಯಿಂದ ನಾವು ಈಗ ಈ ತಿದ್ದುಪಡಿ ವಿಧೇಯಕವನ್ನು ಇಲ್ಲಿ ತಂದು ಇದರಲ್ಲಿ 10,500 ಕೆ. ಜಿ. ಗಳಿಂದ 12,000 ಕೆ. ಜಿ. ಯಷ್ಟು ಹೊರೆಹೊತ್ತಿರುವ ಗೂಡ್ಸ್‌ಗಳ ವೆಹಿಕಲ್ಸ್‌ಗಳಿಗೆ 800 ರೂಪಾಯಿಗಳಷ್ಟು ತೆರಿಗೆ ಕೊಡಬೇಕು ಮತ್ತು 12,000 ಕೆ. ಜಿ. ಗಳಿಗಿಂತ ಹೆಚ್ಚು ತೂಕವನ್ನು ತೆಗೆದುಕೊಂಡು ಹೋಗು

ತ್ತಿದ್ದರೆ,—250 ಕೆ. ಜಿ. ಗಳಿಗಿಂತ ಹೆಚ್ಚು ತೂಕ ಇದ್ದರೆ ಅದಕ್ಕೆ 25 ರೂಪಾಯಿಗಳಷ್ಟು ಹೆಚ್ಚಿನಬೇಕು ಎನ್ನುವುದಕ್ಕಾಗಿ ಈ ತಿದ್ದುಪಡಿಯನ್ನು ಇಲ್ಲಿ ತಂದಿರತಕ್ಕದ್ದು. ಹಿಂದೆ ಮಾನ್ಯ ಸದಸ್ಯರುಗಳು ಮೋಟಾರು ಕಾರುಗಳಿಗೆ ಹೆಚ್ಚಿಗೆ ತೆರಿಗೆ ಹಾಕಿ ಎಂದು ಸಲಹೆಗಳನ್ನು ಕೊಟ್ಟಿದ್ದರು. ಅದರ ಪ್ರಕಾರ ಕೇರಳದಲ್ಲಿರತಕ್ಕಂತಹ ಮಾದರಿಯಲ್ಲಿ ಹಿಂದೆ ಇದ್ದಂತಹ ತೆರಿಗೆಗಳನ್ನು ಹೆಚ್ಚಿಸಿದ್ದೇವೆ. ಹೀಗೆ ಹೆಚ್ಚಿಸಿರುವುದರಿಂದ ಸಾಧಾರಣ 18 ಲಕ್ಷ ರೂಪಾಯಿಷ್ಟು ಆದಾಯ ಬರಬಹುದೆಂದು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಕೊಟ್ಟಿದೆ. ಅದನ್ನು ಮಾನ್ಯ ಸದಸ್ಯರುಗಳು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ಈ ಬಿಲ್ಲಿನಲ್ಲಿ ಇರತಕ್ಕ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ ಹಾಗೆ, ಈಗ ಸರ್ಕಾರಕ್ಕೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಸಾಕಷ್ಟು ಹಣವಿಲ್ಲದೆ, ಅದಕ್ಕೋಸ್ಕರ ಈ 18 ಲಕ್ಷ ರೂಪಾಯಿಯ ಆದಾಯವನ್ನು ತೊರಿಸಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಿಂದೆ ಗೂಡ್ಸ್ ವೆಹಿಕಲ್‌ಗಳ ಮೇಲೆ ತೆರಿಗೆ ಹಾಕುವಾಗ ಆ ತೆರಿಗೆಯು ಸಾಮಾನ್ಯವಾಗಿ ರೈತರ ಮೇಲೆ ಬೀಳುತ್ತದೆ, ಅದಕ್ಕಾಗಿ ಅಂತಹ ವೆಹಿಕಲ್‌ಗಳ ಮೇಲೆ ಹೆಚ್ಚಿನ ತೆರಿಗೆ ಹಾಕಬಾರದು ಎಂದು ಹೇಳಿದ್ದೇವೆ. ಅದಾಗ್ಯೂ ಪ್ರತಿ 250 ಕೆ. ಜಿ. ಗಳಿಗೆ ರೂಪಾಯಿ 37-50 ಪ್ರಕಾರ ತೆರಿಗೆ ಹಾಕಿದ್ದಾರೆ. ಈಗ ಈ ವಾಹನಗಳಿಗೆ ಬೇಕಾದಂಥ ಸ್ಪೇರ್ ಪಾರ್ಟ್ಸ್, ಟೈರ್ಸ್, ಟ್ಯೂಬ್ಸ್ ಮತ್ತು ಇನ್ನಿತರ ಬೇಕಾದಂತಹ ಸಾಮಾನುಗಳ ಬೆಲೆ ಏಪರೀತವಾಗಿರುವುದರಿಂದ ಅದನ್ನೂ ಕೂಡ ಮಾಲೀಕರು ಇದರಲ್ಲಿ ಅಳವಡಿಸಿಕೊಂಡು ದರವನ್ನು ಏರಿಸುತ್ತಾರೆ. ಆದ್ದರಿಂದ ಇಂತಹ ದೊಡ್ಡದಾದ ತೆರಿಗೆಯನ್ನು ಬಡವರ ಮೇಲೆ ಹಾಕಿದಂತಾಗುತ್ತದೆ ಎಂದು ನಾನಾದರೂ ಹೇಳ ಬೇಕಾಗುತ್ತದೆ.

ಇನ್ನು ಕಾರುಗಳ ಮೇಲೆ ಹಾಕುವಾಗ ಒಂದು ಮಿತಿಯಿಲ್ಲದೆ ಏರಿಸಿದ್ದಾರೆ. ಈಗ ಕ್ಲಾಸ್ 2 (2) (a) ಪ್ರಕಾರ 750 ಕೆ. ಜಿ. ನಿಂದ 1,500 ಕೆ. ಜಿ. ಯವರೆಗೆ ರೂಪಾಯಿ 5.65 ಮತ್ತು 16.65 ಎಂದು ಹಾಕಿದ್ದೀರಿ. ಆದರೆ ಈ ತೆರಿಗೆ ಏಧಿಸಿದರೂ ಕೂಡ ಆದಕ್ಕೆ ಬೇಕಾದ, ಸ್ಪೇರ್ ಪಾರ್ಟ್ಸ್ ಸರ್ಕಾರದ ಮತಿಯಿಂದ ಕಂಟ್ರೋಲ್ಡ್ ರೇಟ್ಸಿನಲ್ಲಿ ಒದಗಿಸಿದರೆ ಆಗ ಅವರಿಗೆ ಸುಲಭವಾಗುತ್ತದೆಂದು ಹೇಳುತ್ತೇನೆ. ಗೂಡ್ಸ್ ವೆಹಿಕಲ್ಸ್‌ಗೆ ಮತ್ತು ಕಾರುಗಳಿಗೆ ಬೇಕಾದಂತಹ ಸಾಮಾನುಗಳನ್ನು ಸರ್ಕಾರದ ಮತಿಯಿಂದ ಒದಗಿಸಿಕೊಡುತ್ತೇವೆಂದು ಹಿಂದೆ ಒಂದು ಸಾರಿ ಭರವಸೆ ಕೊಟ್ಟಿದ್ದರು. ಆದರೆ ಈಗ ಎಷ್ಟು ಮಟ್ಟಿಗೆ ಬೆಲೆಗಳು ಏರಿವೆ ಎಂದು ತಮಗೆಲ್ಲಾ ಗೊತ್ತೇ ಇದೆ. ಹಿಂದೆ ಇದ್ದುದಕ್ಕಿಂತ 10 ಪಾಲು ಹೆಚ್ಚಾಗಿದೆ. ಇದನ್ನು ಈಗ ತೆರಿಗೆಯ ರೂಪದಲ್ಲಿ ಜನಸಾಮಾನ್ಯರ ಮೇಲೆ ಹೊರೆಸಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಸಾಪಲ್ಯ ಮಾಡುವುದು ಸರಿಯಲ್ಲ. ಆದ್ದರಿಂದ ಈ 18 ಲಕ್ಷ ರೂಪಾಯಿಯ ತೆರಿಗೆಯನ್ನು ಜನರ ಮೇಲೆ ಹಾಕಬಾರದು ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಈಗ ಈ 18 ಲಕ್ಷ ರೂಪಾಯಿ ಆದಾಯ ಬರುತ್ತದೆಂದು ಈ ತೆರಿಗೆಯನ್ನು ಹಾಕತಕ್ಕದ್ದು ನ್ಯಾಯವಲ್ಲವೆಂದು ನಾನಾದರೂ ಹೇಳಬಯಸುತ್ತೇನೆ. ಈಗ ಪ್ರಶ್ನೋತ್ತರ ಕಾಲದಲ್ಲಿ ರೂಪಾಯಿಯ ಡಿವ್ಯಾಲ್ಯುಯೇಶನ್ ಆದ ಮೇಲೆ ಜನರಿಗೆ ದಿನಪಹ ಸಾಮಾನುಗಳನ್ನು ಒದಗಿಸಲು ಜನತಾ ಬಜಾರ್ ಒದಗಿಸಿದ್ದೇವೆ, ಎಲ್ಲಾ ಕೇಂದ್ರಗಳಲ್ಲೂ ಬ್ಲೇಡ್, ರಿಬ್ಬನ್, ಉಪ್ಪು, ಮೆಣಸಿನಕಾಯಿ. ಅಕ್ಕಿ, ಬೇಳೆ, ಬಟ್ಟೆ, ಊದುಬತ್ತಿ, ಕರ್ಪೂರ ಮುಂತಾದುವು ಗಳನ್ನು ಒದಗಿಸುತ್ತೇವೆ ಎಂದು ಅಪ್ಪಣೆ ಕೊಡಿಸಿ, ಮತ್ತೆ ಅದೇ ದುಡ್ಡನ್ನು ತೆಗೆದುಕೊಂಡು ಜನಗಳ ಮೇಲೆ ಬೇರೆ ಕಡೆಯಿಂದ ಹಾಕುತ್ತಾ ಇರುವುದು ನ್ಯಾಯವೇ, ಸ್ವಾಮಿ. ಹಿಂದೆ ಕಾರುಗಳಮೇಲೆ ಹೆಚ್ಚಿಗೆ ಮಾಡಿ ಎಂದು ಹೇಳಿದ್ದೇವೆ ಈಗ ಗೂಡ್ಸ್ ವಾಹನಗಳ ಮೇಲೆ ಹೆಚ್ಚಿಗೆ ಮಾಡುವುದರಿಂದ ಸಾಗಾಣಿಕೆಗೆ ಎಷ್ಟು ತೊಂದರೆಯಾಗುತ್ತದೆ ! ಈ ಸಾಗಾಣಿಕೆ ದರವನ್ನಾದರೂ ವರ್ತಕರು ಏನು ಮಾಡತ್ತಾರೆ ! ನಿಮಗೆ ಈಗ ಸಾಮಾನು ಬರಬೇಕಾದರೆ ಅದು ಹೇಗೆ ಬರುತ್ತದೆ ! ಈಗ ಬೊಂಬಾಯಿಂದು ಬರಬೇಕಾದರೆ ರೈಲಿನಲ್ಲಿ 7 ದಿವಸಬೇಕಾಗುತ್ತದೆ, ರೋಡಿನಲ್ಲಿ ಬರಬೇಕಾದರೆ, ಮೂರು ದಿವಸ ಬೇಕಾಗುತ್ತದೆ. ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ ಹೇಳಿದ್ದಾರೆ: ಗೂಡ್ಸ್ ಟ್ರಾನ್ಸ್‌ಪೋರ್ಟ್ಸು ರಾಷ್ಟ್ರೀಕರಣ ಮಾಡಬೇಕು ಎಂದು. ಈಗ ಪ್ರಯಾಣ ಮಾಡುವಂತಹ ಬಸ್ಸನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಅದೇ ರೀತಿ ಬೇಕಾದರೆ ಗೂಡ್ಸ್ ವಾಹನಗಳನ್ನು ಕೂಡ ರಾಷ್ಟ್ರೀಕರಣ ಮಾಡಿ. ಆಗ ಬೇಕಾದರೆ ಯೋಚನೆ ಮಾಡೋಣ. ಒಂದು ಕಡೆ ಅಕ್ಕಿ ಮೇಲೆ ಆಸೆ, ಇನ್ನೊಂದು ಕಡೆ ನೆಂಟರ ಮೇಲೆ ಇಷ್ಟ ಎಂದ ಹಾಗಾಯಿತು. ಈಗ ಟೈರ್, ಟ್ಯೂಬ್, ಮತ್ತು ಗಾಡಿಗಳ ಬೆಲೆ ಮತ್ತು ಇದರ ಮೇಲೆ ಆಗತಕ್ಕ ಖರ್ಚು ಎಲ್ಲಾ ಹೆಚ್ಚಿದೆ ಎಂದು ತಾವುಗಳು ಒಪ್ಪಿಕೊಂಡಿದ್ದೀರಿ. ಮತ್ತು 800ರಿಂದ 1200 ಮಾಡಿದ್ದೀರಿ. ಇದು ನ್ಯಾಯವೇ ಎಂದು ನಾನಾದರೂ ಕೇಳುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಈಗ ಕಾರ್ಪೊರೇಶನ್ ಮಾಡಿ ಅನುಭವಿಸಿರುವ ಸುಖವೇ ಸಾಕಾಗುತ್ತದೆ. ಇದರ ಮೇಲೆ ಈ ತಿದ್ದುಪಡಿ ಮಾಡಿ, ಈ 18 ಲಕ್ಷ ರೂಪಾಯಿಯನ್ನು ತೆಗೆದುಕೊಂಡು ನೀವು ಯಾವ ಯೋಜನೆಯನ್ನು ಕೈಗೊಳ್ಳುತ್ತೀರಿ, ಯಾವ ಆಸ್ಪತ್ರೆಯನ್ನು ಮಾಡಬಲ್ಲರಿ, ಅಥವಾ ಎನ್. ಜಿ. ಓ. ಗಳಿಗೆ ಏನಾದರೂ ಕೊಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದರೆ ಅದಕ್ಕೂ ನಿಮ್ಮಿಂದ ಸಾಧ್ಯವಿಲ್ಲವೆಂದು ಹೇಳುತ್ತೀರಿ. ಈ ತೆರಿಗೆಗಳನ್ನು ಹಾಕಿ ಜನರಿಂದ ಉತ್ತಮವಾದ ಹೆಸರನ್ನು ತೆಗೆದುಕೊಳ್ಳಲಾರರಿ. ಪಂಚಾಯಿತಿ ರಾಜ್ಯ ಮಂತ್ರಿಗಳು ಹೆಸರು ತೆಗೆದುಕೊಂಡ ಹಾಗೇ ನೀವು ಏಕೆ ಅನಿಸಿಕೊಳ್ಳಬಾರದು ? ಮುಂದಿನ ವರ್ಷ ಯಾವ ಸರ್ಕಾರ ಬರುತ್ತದೋ ಯಾವ ಮಂತ್ರಿಗಳು ಬರುತ್ತಾರೋ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ತಮ್ಮ ಕಾಲದಲ್ಲಿ ಇಂತಹ ತೆರಿಗೆಗಳನ್ನು ಹಾಕಬೇಡಿರಿ. ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಗಂಜಿ ಎಂದು ಮಾಡುವುದಕ್ಕಾಗುವುದಿಲ್ಲ. ಈಗ ಬ್ಯಾಂಕಿನಿಂದಲೋ ಅಥವಾ ಇನ್ನೆಲ್ಲಿಂದಲೋ ಸಾಲ ಮಾಡಿ ಒಂದು ರಾರಿ ಇಟ್ಟುಕೊಂಡಿದ್ದರೆ. ಅವನ ಮೇಲೆ ಇಂಥ ತೆರಿಗೆಗಳನ್ನು ಹಾಕಿದರೆ ಅವನು ಏನು ರಸ್ತೆಯ ಮೇಲೆ ರಾರಿಯನ್ನು ತಂದು ಇಡಬೇಕೇನು ! ರಾಗಿ, ಗೋಧಿ, ಅಕ್ಕಿಯ ಬೆಲೆ ಕಡಿಮೆ ಮಾಡುತ್ತೇವೆಂದು ಹೇಳಿ ಎಲ್ಲದಕ್ಕೂ ಜಾಸ್ತಿ ಮಾಡಿದಿರಿ. ಹೀಗೆರ್ಲಾ ಮಾಡುವುದು ನಿಮಗೆ ನ್ಯಾಯವೇ ಸ್ವಾಮಿ ! 1967ನೇ ಮಾರ್ಚ್, ಫೆಬ್ರುವರಿಯೊಳಗೆ ಎರ್ಲಾ ಈ ಅನುಭವ ತೆಗೆದುಕೊಂಡು ಜನರು ನಿಮಗೆ ಶಾಪ ಹಾಕುತ್ತಾರೆ. ಬಹುಶಃ ನೀವು ಈಗ ಈ ತೆರಿಗೆಗಳನ್ನೆರ್ಲಾ ಏರಿಸುತ್ತಿರುವುದು, ದೊಡ್ಡ ದೊಡ್ಡ ಅಧಿಕಾರಿಗಳಿಗೆ ವಿಮಾನದಲ್ಲಿ ಡೆಲ್ಲಿಗೆ ಓಡಾಡುವುದಕ್ಕೋ ಅಥವಾ ಅಲ್ಲಿ ಅಶೋಕ ಹೋಟೆಲಲ್ಲಿ ಇರುವುದಕ್ಕೋ ಎಂದು ಕಾಣುತ್ತದೆ.

ಈ ತಿದ್ದುಪಡಿ ಕಾನೂನು ಪ್ರಕಾರ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಜಾಸ್ತಿ ಮಾಡುವುದರಿಂದ ಏನಾಗುತ್ತದೆ ಅಂದರೆ ದಾವಣಗೆರೆಯಲ್ಲಿ ರಾಗಿಯ ಬೆಲೆ 55 ರೂಪಾಯಿ ಇದ್ದರೆ ಬೆಂಗಳೂರಿನಲ್ಲಿ 70 ರೂಪಾಯಿ ಬೆಲೆಗೆ ಮಾರಾಟವಾಗುತ್ತದೆ. ಟ್ಯಾಕ್ಸ್ ಹೆಚ್ಚು ಆದ ಮೇಲೆ ಟ್ರಾನ್ಸ್‌ಪೋರ್ಟ್ ಖರ್ಚು ಜಾಸ್ತಿಯಾಗುತ್ತದೆ. ಆದುದರಿಂದ ಈ ತಿದ್ದುಪಡಿ ಕಾನೂನನ್ನು ನಾವು ವಿರೋಧಿಸುತ್ತೇವೆ. ಈ ಕಾನೂನು ಜಾರಿ ಮಾಡುವುದಕ್ಕೂ ಕೂಡ ತೊಂದರೆ ಇದೆ. ಸರಕಾರದವರು ತೂಕ ಮಾಡುವ ವೆಯಿಂಗ್ ಮೆಷಿನ್ಸ್ ಕೂಡ ಒಂದೆರಡು ಮಾತ್ರ ಇಟ್ಟಿದ್ದಾರೆ. ಕಾನೂನು ಹಿಡಿತದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ರಾರಿಯವರು ವೆಯಿಂಗ್ ಬ್ರಿಡ್ಜಸ್ ಇರತಕ್ಕ ಮಾರ್ಗದಿಂದ ಬರದೆ ಬೇರೆ ಮಾರ್ಗದಿಂದ ಬರಬಹುದು. ಅವರು ಕಳ್ಳತನ ಮಾಡುತ್ತಾರೆ. ಇಂಥವರನ್ನು ಹಿಡಿಯುವುದಕ್ಕೆ ಅವಕಾಶ ಇಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು ಐದಾರು ವೇಯಿಂಗ್ ಬ್ರಿಡ್ಜಸ್ ಮಾತ್ರ ಇವೆ. ಎರ್ಲಾ ಮಾರ್ಗಗಳಲ್ಲಿ ಈ ವ್ಯವಸ್ಥೆ ಇಲ್ಲ. ಆದರೆ ಮೋಟರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ಸ್ ಮಾತ್ರ ನಿಮ್ಮ ಕೈಯಲ್ಲಿ ಇದ್ದಾರೆ. ಹಾಗಾದರೆ ನಿಮ್ಮ ಇನ್‌ಸ್ಪೆಕ್ಟರ್‌ಗಳು ಎಷ್ಟು ರಾರಿಗಳ ಮೇಲೆ ಇದುವರೆಗೆ ಕೇಸು ಹಾಕಿದ್ದಾರೆ ಎಂಬುದನ್ನು ಹೇಳುತ್ತೀರಾ ? ಇಂಥಾ ಕಾನೂನು ಮಾಡಬೇಡಿ. ಜನರಿಗೆ ತೊಂದರೆ ಹಿಂಸೆ ಮಾಡಬೇಡಿ ಎಂದು ಹೇಳುತ್ತೇನೆ. ಯಾವ ರೀತಿ ಕಾನೂನು ರಕ್ಷಣೆ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ? ತುಮಕೂರಿನಲ್ಲಿ ತೂಕ ಮಾಡುವ ಒಂದು ಮೆಷಿನ್ ಇದೆ. ಇದುವರೆಗೆ ಬೊಂಬಾಯಿಂದ ಬರತಕ್ಕ ಎಷ್ಟು ರಾರಿಗಳನ್ನು ಹಿಡಿದಿದ್ದೀರಿ ? ಎಷ್ಟು ರಾರಿಗಳ ಮೇಲೆ ಕೇಸು ಹಾಕಿದ್ದೀರಿ ? ಈಗ ಇರತಕ್ಕ ಕಾನೂನು ಪ್ರಕಾರ ಟ್ಯಾಕ್ಸ್ ವಸೂಲು ಮಾಡಿದ್ದೀರಾ ? ಈ ತಿದ್ದುಪಡಿ ಮಸೂದೆ ಜಾರಿಗೆ ಬಂದ ಮೇಲೆ ವರ್ಷಕ್ಕೆ 18 ಲಕ್ಷ ರೂಪಾಯಿ ಉತ್ಪತ್ತಿ ಬರುತ್ತದೆ ಎಂದು ಹೇಳಿದ್ದೀರಿ. ಮಂತ್ರಿಗಳು ತಮ್ಮ ಇಲಾಖೆಯಿಂದ ಇಷ್ಟು ಉತ್ಪತ್ತಿ ಬರುತ್ತದೆ, ಇಷ್ಟು ಹಣ ಸಂಪಾದನೆಯಾಗುತ್ತದೆ ಎಂದು ಹೇಳುವುದಕ್ಕೆ ಹಟಮಾಡುತ್ತಿದ್ದಾರೆ. ಇದರಿಂದ ಜನರಿಗೆ ಕಲ್ಯಾಣವಾಗುವುದಿಲ್ಲ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ದೊಡ್ಡ ದೊಡ್ಡ ಅಧಿಕಾರಿಗಳಿಗೆ ಎರಡು ಸಾವಿರ, ಮೂರು ಸಾವಿರ ಸಂಬಳ ಏತಕ್ಕಾಗಿ ಕೊಡುತ್ತೀರಿ ? ದೊಡ್ಡ ದೊಡ್ಡ ಅಧಿಕಾರಿಗಳಿಗೆ ಕೊಡುವ ಸಂಬಳ ಕಡಿಮೆ ಮಾಡಬಹುದು. ಆದಾಯಕ್ಕಿಂತಲೂ ಹೆಚ್ಚು ಹಣ ಏಕೆ ಖರ್ಚು ಮಾಡುತ್ತೀರಿ ? ನಮ್ಮ ಮಂತ್ರಿಗಳಲ್ಲಿ ದೇಶಪ್ರೇಮ ಇರ್ಲಾ ಎಂದು ಹೇಳುವುದಿಲ್ಲ. ನಮ್ಮ ರಾಜ್ಯ ಚೆನ್ನಾಗಿ ಆಗಬೇಕು, ದೇಶ ಉದ್ಧಾರ ಆಗಬೇಕು ಎಂದು ಎಲ್ಲರ ಮನಸಿನಲ್ಲಿಯೂ ಇದೆ. ಮೈಸೂರು ದೇಶದ ಎಕನಾಮಿಕ್ ಸರ್ವೇ ಮಾಡಿ ಲೋಗನಾಥನ್ ಅವರು ವರದಿಯಲ್ಲಿ ಹೇಳಿರುವುದನ್ನು ಗಮನಿಸಬೇಕು. ಬೆನ್ನು ಮೂಳೆ ಬಾಗುವವರೆಗೂ ಟ್ಯಾಕ್ಸ್ ಹಾಕಿದೆ ಎಂದು ಅವರು ವರದಿ ಮಾಡಿದ್ದಾರೆ. ಆದುದರಿಂದ ಈ ರೀತಿ ಹೆಚ್ಚು ತೆರಿಗೆಯನ್ನು ಈ ತಿದ್ದುಪಡಿಯಿಂದ ಹಾಕುವುದು ಉಚಿತವಲ್ಲ. ರಾರಿ ಮೇಲೆ ಟ್ಯಾಕ್ಸ್ ಹಾಕಬೇಡಿ. ಬೇಕಾದರೆ ಬಿಳಿ ಚೋಪಿ ಹಾಕಿಕೊಂಡು ಕಾರುಗಳಲ್ಲಿ ಓಡಾಡುವವರ ಮೇಲೆ ತಲೆಗೆ 30 ರೂಪಾಯಿ ಟ್ಯಾಕ್ಸ್ ಹಾಕಬಹುದು. ಕಾರುಗಳ ಮೇಲೆ ಟಾಕ್ಸ್ ಹಾಕಬಹುದು. ರಾರಿಗಳ ಮೇಲೆ ಟ್ಯಾಕ್ಸ್ ಹಾಕುವು

ದರಿಂದ ಸಾಮಾನ್ಯ ಜನತೆಗೆ, ಬಡ ಜನರಿಗೆ ತೊಂದರೆಯಾಗುತ್ತದೆ. ಬಡ ಜನರು ಉಪಯೋಗಿಸುವ ಈರುಳ್ಳಿ ಬೆಲೆ ಜಾಸ್ತಿಯಾಗುತ್ತದೆ. ಈರುಳ್ಳಿ ಬೆಲೆ ಜಾಸ್ತಿಯಾಗುವುದರಿಂದ ಒಂದು ಮಸಾಲೆ ದೋಸೆ ಬೆಲೆ 75 ಪೈಸೆಯಾಗುತ್ತದೆ. ಇದೇ ರೀತಿಯಾಗಿ ವಡೆ, ಬೋಂಡ, ಉದ್ದಿನವಡೆ ಬೆಲೆ ಜಾಸ್ತಿಯಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಿಗೆ ದೋಸೆ, ವಡೆ, ಇಡ್ಡಲಿ ತಯಾರ್ಮಾಡುವ ಅನುಭವ ಚೆನ್ನಾಗಿ ಬಂದಿದೆ ಎಂದು ಕಾಣುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗುಡ್ಸ್ ವೆಹಿಕಲ್ಸ್ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡುವುದರಿಂದ ಈರುಳ್ಳಿ ರಾಗಿ ಜೋಳ ಅಕ್ಕಿ ಇವುಗಳ ಬೆಲೆ ಜಾಸ್ತಿಯಾಗುತ್ತದೆ. ಇದರಿಂದ ಬಡ ಜನರಿಗೆ ಉಪಯೋಗವಾಗುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾರುಗಳ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿ ನಮಗೇನೂಃದುಃಖವಿಲ್ಲ ಲಾರಿ ಇಟ್ಟುಕೊಂಡವರು ಮುನಿಚಿನ್ನಪ್ಪನಂಥವರು ನಮ್ಮನ್ನು ರಕ್ಷಣೆ ಮಾಡಿ ಎಂದು ಅಳುತ್ತಿದಾರೆ. ಅದುದರಿಂದ ದೊಡ್ಡ ಮನಸ್ಸು ಮಾಡಿ ಗುಡ್ಸ್ ವೆಹಿಕಲ್ ಮೇಲೆ ಟ್ಯಾಕ್ಸ್ ಹಾಕಬಾರದು. 18 ಲಕ್ಷ ಇಷ್ಟು ಸ್ವಲ್ಪ ಹಣಕ್ಕೋಸ್ಕರ ತಾವು ಮನಸ್ಸು ಮಾಡಬೇಡಿ. ಕಾರುಗಳ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ನಾವು ಒಪ್ಪುತ್ತೇವೆ. 1967 ನೇ ಮಾರ್ಚ್ ನಂತರ ಯಾರು ಅಧಿಕಾರದಲ್ಲಿ ಇರುತ್ತಾರೋ ನೋಡೋಣ. ಮುಖ್ಯ ಮಂತ್ರಿಗಳಲ್ಲಿ ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಬಡವರ ಮೇಲೆ ಇನ್-ಡೈರೆಕ್ಟ್ ಆಗಿ ಟ್ಯಾಕ್ಸ್ ಹಾಕುವುದಕ್ಕೆ ಏರ್ಪಾಡು ಮಾಡಬೇಡಿ ಎಂದು ಹೇಳುತ್ತೇನೆ. ಇದರಿಂದ ಜನರಿಗೆ ಕಷ್ಟವಾಗುತ್ತದೆ. ಕಾರುಗಳ ಮೇಲೆ ಬೇಕಾದರೆ ಟ್ಯಾಕ್ಸ್ ಹಾಕಬಹುದು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The House will now rise for tea and will meet at 3-30 P.M.

The House adjourned for Recess at Three of the Clock and reassembled at Thirty-five Minutes past Three of the Clock.

[MR. SPEAKER in the Chair]

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ಪ್ರತಿಯೊಂದು ಸಾರಿ ಈ ಸಭೆ ಸೇರಿದಾಗಲೆಲ್ಲ ರಾಜ್ಯ ಸರ್ಕಾರ ಒಂದಲ್ಲ ಒಂದು ರೀತಿಯ ತೆರಿಗೆ ಮಸೂದೆಯನ್ನು ತರುತ್ತಿದೆ. ಈ ತೆರಿಗೆಯ ವಿಚಾರವನ್ನು ಹೇಳುವುದಾದರೆ, ಯಾವ ರಾಜ್ಯದಲ್ಲಿಯೂ ಕೂಡ ಇಷ್ಟೊಂದು ಅಧಿಕವಾದಂಥ ತೆರಿಗೆಯನ್ನು ಹಾಕಿಲ್ಲ. ಮೈಸೂರು ರಾಜ್ಯ ತೆರಿಗೆಯನ್ನು ಹಾಕುವುದರಲ್ಲಿ ಮತ್ತು ಜನತೆಯನ್ನು ತೆರಿಗೆ ಹಾಕಿ ಶೋಷಣೆ ಮಾಡುವುದಲ್ಲಿ ಬಹಳ ಮುಂದಿದೆ ಎಂದು ಹೇಳಬೇಕಾಗುತ್ತದೆ...

Sri C. J. MUCKANNAPPA.—Sir, the Press has published that Sri G. Duggappa has resigned.

Mr. SPEAKER.—Which press and where ?

Sri C. J. MUCKANNAPPA.—It is Samyukta Karnataka. May I know whether the Speaker has received any communication. He has resigned the Congress membership as well as the membership of the House.

Mr. SPEAKER.—Order, order.

Sri K. S. SURYANARAYANA RAO.—I will just add to what Sri Muckannappa has said. When we made enquiries in responsible quarters in the Congress it is understood that he has not resigned from the Congress but from the Assembly membership.

Mr. SPEAKER.—Order, order. The initial suggestion is not good ; further suggestion is bad and the inference drawn is worse. The only way known to law when a member resigns is, to address a letter to the Speaker and anything else has no value. Therefore if the press publishes, it has no value.

Sri C. J. MUCKANNAPPA.—Let us not blame the press.

Mr. SPEAKER.—I blame this hon'ble member more than the Press.

Sri C. J. MUCKANNAPPA.—I take the blame. It is not the press.

Mr. SPEAKER —The Press should not publish if they can avoid.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ರಾಜ್ಯದಲ್ಲಿ ಹೆಚ್ಚು ತೆರಿಗೆಯನ್ನು ಹಾಕುತ್ತಿರುವುದರಿಂದ ಸಮಾಜ ವಾದವನ್ನು ಈ ದೇಶದಲ್ಲಿ ತರುವುದಾಗಿ ಹೇಳುತ್ತಿದ್ದರೂ, ಆ ದಿಸೆಯಲ್ಲಿ ರಾಜ್ಯ ಸರ್ಕಾರ ವಿಫಲ ವಾಗಿದೆ. 18 ಲಕ್ಷ ರೂಪಾಯಿ ಉತ್ಪತ್ತಿ, ಈ ತೆರಿಗೆಯನ್ನು ಹಾಕುವುದರಿಂದ ಬರುತ್ತದೆ ಮತ್ತು ನಾಲ್ಕನೆಯ ಯೋಜನೆಯನ್ನು ಯಶಸ್ವಿಯಾಗಿ ಮಾಡಬೇಕಾಗಿದೆ ಎನ್ನುವಂಥ ಮಾತನ್ನು ಸ್ವೇಟ್ ಮೆಂಟ್ ಆಫ್ ಅಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಕೊಟ್ಟಿದ್ದಾರೆ. ಬರೀ 18 ಲಕ್ಷ ರೂಪಾಯಿಗಳಿಗೆ ಇಷ್ಟು ದೊಡ್ಡ ಮನೂದೆಯನ್ನು ಮಂಡಿಸಿ ಮಂತ್ರಿಗಳು ಎಲ್ಲ ವಾಹನಗಳ ಮೇಲೂ ಇಷ್ಟೊಂದು ಗಾತ್ರವಾದ ತೆರಿಗೆಯನ್ನು ಹಾಕಿ ಹಣವನ್ನು ವಸೂಲ್ಮಾಡಿ ಯೋಜನೆಗಳನ್ನು ಯಶಸ್ಸಿಯಾಗಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಸ್ವಾಮಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಸರ್ಕಾರ ತೆರಿಗೆಯನ್ನು ಹಾಕಿ ಈ ದೇಶದಲ್ಲಿ ಮಾಡಿರ ತಕ್ಕ ಮೂರು ಪಂಚವಾರ್ಷಿಕ ಯೋಜನೆಗಳಿಂದ ಏನು ಫಲ ಬಂದಿದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. 18 ಲಕ್ಷ ರೂಪಾಯಿಗಳಿಗೋಸ್ಕರ ಈ ಮನೂದೆಯನ್ನು ತರದೆ ಮಿತವ್ಯಯವನ್ನು ಸಾಧಿಸಿ ತೆರಿಗೆಯ ಹೊರೆಯನ್ನು ಕಡಮೆ ಮಾಡಬಹುದಾಗಿತ್ತು. 18 ಲಕ್ಷ ರೂಪಾಯಿ ಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತಿರತಕ್ಕ ಸರ್ಕಾರ ಈ ದೇಶದಲ್ಲಿ ನಾಲ್ಕು ಪರ್ಸೆಂಟಿಗೂ ಇಲ್ಲದೆ ಇದ್ದ ಒಂದು ದೊಡ್ಡ ರಾಜ್ಯೋತ್ಸವವನ್ನು, ಕರ್ನಾಟಕ ರಾಜ್ಯೋತ್ಸವವನ್ನು 51 ಲಕ್ಷ ರೂಪಾಯಿಗಳಿಗೆ ಮೀರಿದ ಖರ್ಚನ್ನು ಮಾಡಿ ಚುನಾವಣೆಯ ಕಾಲದಲ್ಲಿ ಜನತೆಯ ಮನಸ್ಸನ್ನು ಒಲಿಸಲಿಕ್ಕೆ ಪ್ರಯತ್ನ ಮಾಡಲು ಈ ದುಂದು ವೆಚ್ಚವನ್ನು ರಾಜ್ಯ ಸರ್ಕಾರ ಮಾಡಿದೆ. ಇಂಥ ದುಂದು ವೆಚ್ಚವನ್ನು ಮಾಡತಕ್ಕ ಸರ್ಕಾರ ಈ 18 ಲಕ್ಷ ರೂಪಾಯಿಗಳಲ್ಲಿ ಯಾವ ಯೋಜನೆಯನ್ನು ಯಶಸ್ವಿಯಾಗಿ ಮಾಡಬಲ್ಲದು ಮತ್ತು ಅದರ ಫಲವನ್ನು ಜನತೆಗೆ ಯಾವ ರೀತಿಯಲ್ಲಿ ಕೊಡಬಲ್ಲದು ಎನ್ನುವ ವಿಚಾರನನ್ನು ನಾವು ನೋಡಬೇಕಾಗು ತ್ತದೆ.

ಸ್ವಾಮಿ, ಅನೇಕ ಇಲಾಖೆಗಳಲ್ಲಿ ಹಣ ದುರುಪಯೋಗವಾಗುತ್ತಿದೆ, ಖಾದಿ ಬೋರ್ಡಿನಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಯಿತು, ಈ ಬಗ್ಗೆ ತನಿಖೆ ನಡೆಸಿ ಹಣ ದುರುಪಯೋಗ ವಾಗಿರುವುದನ್ನು ಖಜಾನೆಗೆ ಬರಮಾಡಿಕೊಳ್ಳಲು ಸರಕಾರ ಯಾವ ಕ್ರಮವನ್ನೂ ಕೈಕೊಳ್ಳದಿರುವಾಗ ಈ ತೆರಿಗೆ ಹಾಕುವುದರ ಔಚಿತ್ಯವಾದರೂ ಏನು ಎಂಬುದನ್ನು ಉತ್ತರ ಹೇಳುವಾಗ ಸರಕಾರ ತಿಳಿಸ ಬೇಕು. ಶರಾವತಿ ಯೋಜನೆಗೆ ಸಂಬಂಧಿಸಿದಂತೆ ಕೋಟಿಗಟ್ಟಲೆ ಹಣ ದುರುಪಯೋಗವಾಗಿದೆ ಎಂದು ಮಂತ್ರಿಗಳ ಮೇಲೆ ಆರೋಪ ಹೊರಿಸಲಾಯ್ತು, ಹೀಗೆ ಬ್ರಹತ್ ಭ್ರಷ್ಟಾಚಾರದ ಪ್ರಕರಣ ಗಳು ಅನೇಕ ಇವೆ. ಹೀಗೆ ಹಣ ಪೋಲುಮಾಡಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಒಂದು ಛಾರ್ಜುಷೀಟನ್ನು ತಯಾರಿಸಿ ದೆಹಲಿಯವರೆಗೆ ಮುಟ್ಟಿಸಿದ್ದಾಯ್ತು. ಹೀಗಿರುವಾಗ ರಾಜ್ಯ ಸರಕಾರ ಯಾವ ನೈತಿಕ ಆಧಾರದ ಮೇಲೆ ಈ ತೆರಿಗೆಯನ್ನು ಹಾಕುತ್ತಿದೆಯೋ ತಿಳಿಯದು. ರಾರಿ ಗಳ ಮೇಲೆ ಹಾಕುವ ಈ ತೆರಿಗೆ ಜನರ ಮೇಲೆ ಯಾವ ರೀತಿ ಬೀಳುತ್ತದೆ ಎಂಬುದನ್ನು ಸರಕಾರ ಯೋಚನೆ ಮಾಡಬೇಕು. ಇದನ್ನು ಪ್ರತಿಯೊಬ್ಬ ರೈತನೂ ಕೊಡಬೇಕಾಗುತ್ತದೆ; ರೈತರಿಗೆ ಬೇಕಾ ಗಿರುವ ಗೊಬ್ಬರ ಮುಂತಾದ ಸಾಧನಗಳನ್ನು ರಾರಿಯಲ್ಲಿ ಸಾಗಿಸುವಾಗ ಅವರೇ ಈ ತೆರಿಗೆ ಕೊಡ ಬೇಕು. ಈ ದಿವಸ 50 ರೂಪಾಯಿ ತೆರಿಗೆಯನ್ನು ರಾರಿ ಮಾಲೀಕ ಕೊಟ್ಟರೆ ರೈತನ ಮೇಲೆ 100 ರೂಪಾಯಿ ಹೇರುತ್ತಾನೆ. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ರೈತರ ಮೇಲೆ ಮತ್ತು ಸಾಮಾನ್ಯ ಜನರ ಮೇಲೆ ಈ ತೆರಿಗೆ ಬೀಳುವುದು. ಬಡ ಜನರ ಮೇಲೆ ಇದನ್ನು ಪ್ರತ್ಯಕ್ಷವಾಗಿ ಹಾಕ ದಿದ್ದರೂ ಕೂಡ ಪರೋಕ್ಷವಾಗಿ ಪರಿಣಾಮದಲ್ಲಿ ಬಡವರಿಗೆ ತೊಂದರೆಯಾಗುತ್ತದೆ.

ಸ್ವಾಮಿ, ರಾರಿಗಳ ವಿಷಯವನ್ನು ಈಗಾಗಲೆ ನಮ್ಮ ಪಕ್ಷದವರು ಅನೇಕ ಸಾರಿ ಹೇಳಿದ್ದಾರೆ, ರಾರಿಗಳನ್ನು ರಾಷ್ಟ್ರೀಕರಣ ಮಾಡಬೇಕು, ಈ ದೇಶದ ಸಂಪತ್ತು ಕೆಲವೇ ಜನರ ಕೈಲಿ ಸೇರಿ ದೇಶ ದಲ್ಲಿ ಬಂಡವಾಳಶಾಹಿಗಳು ಬೇಕಾದಷ್ಟು ಅಸ್ತಿಪಾಸ್ತಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ

ತೆರಿಗೆಯು ಸಾಮಾನ್ಯ ಜನರ ಮೇಲೆ, ರೈತರ ಮೇಲೆ ಬೀಳುತ್ತದೆ. ಟ್ರಾಕ್ಟರು ಮತ್ತು ಲಾರಿಗಳನ್ನು ಸಾಮಾನ್ಯರು ಉಪಯೋಗ ಮಾಡುವಾಗ ಇದನ್ನು ಅವರೇ ತೆರಬೇಕಾಗುತ್ತದೆ. ಈ ರೀತಿಯಲ್ಲಿ ತೆರಿಗೆಯನ್ನು ಹಾಕುವ ನೀತಿಯು ಸಮಾಜವಾದದ ನೀತಿಗನುಗುಣವಾಗಿದೆಯೇ ಎಂಬುದನ್ನು ಆಲೋಚನೆ ಮಾಡಿದ್ದೀರಾ ಎಂದು ನಾನು ಪ್ರಶ್ನೆ ಹಾಕುತ್ತೇನೆ. ಈ ರೀತಿ ತೆರಿಗೆ ಹಾಕಿ 18 ಲಕ್ಷ ರೂಪಾಯಿಗಳನ್ನು ಪಡೆಯುವುದಕ್ಕೆ ಬದಲಾಗಿ ಮಂತ್ರಿಗಳಿಗೆ ಅವರು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಎಷ್ಟು ಆಸ್ತಿ ಇತ್ತು, ಅಧಿಕಾರಕ್ಕೆ ಬಂದಮೇಲೆ ಎಷ್ಟಿದೆ, ಆವರ ನೆಂಟರಿಷ್ಟರ ಹೆಸರಿನಲ್ಲಿ ಮಂತ್ರಿಗಳು ಎಷ್ಟು ಆಸ್ತಿ ಮಾಡಿದ್ದಾರೆ; ದೇಶದಲ್ಲಿ ಎಷ್ಟು ಹಣ ದುರುಪಯೋಗ ಮಾಡಿದ್ದಾರೆ ಎಂದು ತನಿಖೆ ಮಾಡಿ ಅದನ್ನು ಬರಮಾಡಿಕೊಂಡು ಖಜಾನೆಗೆ ಭರ್ತಿಮಾಡಿದ್ದರೆ ಸಮಾಜವಾದವನ್ನು ಆನುಷ್ಠಾನಕ್ಕೆ ತರುತ್ತಿದ್ದಾರೆಂದು ಬಹುಷಃ ಶಾಭಾಸ್ ಗಿರಿ ಕೊಡಬಹುದಾಗಿತ್ತು. ರಾಜ್ಯ ಸರಕಾರವು ಮಂತ್ರಿಗಳು ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗಪಡಿಸಿದ್ದಾರೆಂಬ ಆಪಾದನೆ ಹೊರಿಸಿದ್ದಾರೆ. ಈ ಸಭೆಯಲ್ಲಿ ಇದನ್ನು ತಿಳಿಸಿದ್ದಾರೆ. ಆ ಹಣವನ್ನು ಖಜಾನೆಗೆ ಬರಮಾಡಿಕೊಂಡು ಈ ತೆರಿಗೆಯನ್ನು ಬಿಡಲು ಸಾಧ್ಯವಿಲ್ಲವೇ? ಈಗ 50-60ರಷ್ಟು ತೆರಿಗೆ ಹಾಕುವಾಗ ವಾಹನಗಳು ಓಡಾಡುವ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಡಲು ಏನು ಕಾರ್ಯಕ್ರಮ ಕೈಕೊಂಡಿದ್ದೀರಿ? ವಾಹನಗಳ ಮೇಲೆ ಮತ್ತು ಅವುಗಳಲ್ಲಿ ಸಾಗಿಸುವ ಸಾಮಾನುಗಳ ತೂಕದ ಮೇಲೆ ತೆರಿಗೆ ಹಾಕುತ್ತಿದ್ದೀರಿ. ಆದರೆ ಸಂಚಾರ ಮಾಡುವ ರಸ್ತೆ ಎಷ್ಟು ಶಿಥಿಲವಾಗಿದೆಯೆಂಬುದನ್ನು ನೋಡಿದ್ದೀರಾ? ಲಾರಿಗಳ ಓಡಾಟದಿಂದ ಕೆಲವು ಕಡೆ ಅಪಘಾತವಾಗುತ್ತಿದೆ, ಮರಗಳಿಗೆ ಡಿಕ್ಕಿ ಹೊಡೆದು ಮತ್ತು ಕೊಂಬೆಗಳು ತಡೆದು ಅನಾಹುತವಾಗುತ್ತಿದೆ. ಇದನ್ನೆಲ್ಲಾ ಗಮನಿಸಿ ಎಷ್ಟು ತೂಕ ಹಾಕಬೇಕು ಎಂದು ಮುಂತಾಗಿ ಏನಾದರೂ ನಿರ್ದಿಷ್ಟವಾಗಿ ಸೂಚನೆ ಕೊಟ್ಟಿದ್ದೀರಾ? ಇದೆಲ್ಲಾ ನೋಡದೆ ಜನ ಹಾನುವಾರುಗಳು ಸಾಯುತ್ತಿರುವಾಗ ಈ ವಿಧೇಯಕವನ್ನು ತಂದಿರುವುದರ ಔಚಿತ್ಯವಾದರೂ ಏನು! ಈಗ ಬೊಂಬಾಯಿನಿಂದ ತುಮಕೂರು ಮಾರ್ಗವಾಗಿ ಹೋಗುವ ರಸ್ತೆಯಲ್ಲಿ ಹೆಚ್ಚು ಲಾರಿಗಳ ಓಡಾಟದಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಹೀಗಿರುವಾಗ ತೆರಿಗೆ ಹಾಸ್ತಿ ಮಾಡಿದರೆ ಸರಕನ್ನು ಹೆಚ್ಚಿಗೆ ತುಂಬಿ ಅಪಘಾತಕ್ಕೆ ಅವಕಾಶವಾಗುತ್ತದೆ. ವಾಹನಗಳನ್ನು ಅಜಮಾಯಿಷಿ ಮಾಡುವ ಅಧಿಕಾರಿಗಳ ಬಗ್ಗೆ ವಿಚಾರ ಮಾಡಿ ಸರಿಯಾಗಿ ಕರ್ತವ್ಯ ಪರಿಪಾಲನೆ ಮಾಡುತ್ತಿರುವರೇ ಎಂಬುದನ್ನು ನೋಡಿದ್ದೀರಾ? ತುಮಕೂರಿನಲ್ಲಿ ನೋಡುವುದಾದರೆ ಲಾರಿಗಳನ್ನು ತೂಕ ಹಾಡುವ ಕಡೆಗೆ ಬರುವ ಇನ್‌ಸ್ಪೆಕ್ಟರು ಬೆಳಿಗ್ಗೆ ಎಂಟೂವರೆ ಗಂಟೆಗೆ ಬರೀ ಜೇಬಿನಲ್ಲಿ ಬಂದು 3 ಗಂಟೆಯ ವೇಳೆಗೆ ಅದನ್ನು ಭರ್ತಿಮಾಡಿಕೊಂಡು ಹೋಗುತ್ತಾನೆ. ಅಂಥ ಕಡೆ ಕೆಲಸಮಾಡಲು ಅಧಿಕಾರಿಗಳಲ್ಲಿ ಪೈಪೋಟಿ ಇದೆ, ಇದಕ್ಕಾಗಿ ಬೇಕಾದವರಿಂದ ಶಿಫಾರಸು ಮಾಡಿಸುತ್ತಾರೆ. ಈಗ ಹೆಚ್ಚಿಸುವ ವಾಹನ ತೆರಿಗೆಯು ಈ ರೀತಿ ಲಂಡಕೋರರ ಕಿಸೆಗೆ ಹೋಗುವ ಪರಿಸ್ಥಿತಿ ಇದೆ. ಆದುದರಿಂದ ಬೇರೆ ಸೂಕ್ತ ರೀತಿಯಲ್ಲಿ 18 ಲಕ್ಷ ರೂಪಾಯಿಗಳು ಬರುವಂತೆ ವ್ಯವಸ್ಥೆ ಮಾಡಿ ಈ ತೆರಿಗೆಯನ್ನು ಬಿಡುವುದು ಸೂಕ್ತವೆಂದು ಸೂಚಿಸುತ್ತೇನೆ. ಅಲ್ಲದೆ ಈ ತೆರಿಗೆ ವಸೂಲು ಮಾಡುವ ಸಿಬ್ಬಂದಿಯ ಖರ್ಚಿಷ್ಟು ಎಂಬುದನ್ನು ಸಹ ಯೋಚನೆ ಮಾಡಬೇಕು. 18 ಲಕ್ಷ ರೂಪಾಯಿಗಳನ್ನು ವಸೂಲು ಮಾಡಲು 28 ಲಕ್ಷ ಸಿಬ್ಬಂದಿಗಾಗಿ ಖರ್ಚುಮಾಡಬೇಕಾಗುತ್ತದೆ. ಈ ರೀತಿಯ ದುಂದುವೆಚ್ಚ, ಭ್ರಷ್ಟಾಚಾರ ನಿಲ್ಲಿಸಿದರೆ ಬಹುಶಃ ಈ ತೆರಿಗೆ ಹಾಕುವ ಪ್ರಶ್ನೆಯೇ ಇರುವುದಿಲ್ಲ. ರೈತರಮೇಲೆ ಅಭಿಮಾನ ವಿದ್ದರೆ ರೈತರ ಕ್ಷೇತ್ರದಿಂದ ಚುನಾಯಿತರಾಗುವ ನೀವು ರೈತರ ಹಿತದೃಷ್ಟಿಯಿಂದಲಾದರೂ ಈ ತೆರಿಗೆಯನ್ನು ಹಾಕಬಾರದು. ರೈತರಿಗಾದರೂ ಈ ತೆರಿಗೆಯನ್ನು ಮನ್ನಾಮಾಡಬೇಕು. ಈ ಬಗ್ಗೆ ಒಂದು ತಿದ್ದುಪಡಿಯನ್ನಾದರೂ ತರುವುದು ಸೂಕ್ತ. ಈ ತೆರಿಗೆಯನ್ನು ವಸೂಲು ಮಾಡುವಾಗ ವಾಹನಗಳು ಓಡಾಡುವ ರಸ್ತೆ ಮತ್ತು ಸೇತುವೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಪಬ್ಲಿಕ್ ವರ್ಕ್ಸ್ ಇಲಾಖೆಗೇನಾದರೂ ಆದೇಶ ಕೊಟ್ಟಿದ್ದೀರಾ? ಸಾರಿಗೆ ತೂಕ ಜಾಸ್ತಿಯಾಗಿ ರಸ್ತೆ ಹಾಳಾಗುತ್ತದೆ, ಅನೇಕ ಕಡೆ ಲಾರಿಗಳು ಸ್ಪೆಟ್‌ಫಂಡ್ ರಸ್ತೆ ಬಿಟ್ಟು ಬೇರೆ ರಸ್ತೆಗಳಲ್ಲಿ ಓಡಾಡಿದಾಗ ಸೇತುವೆಗಳು ಮುರಿದಿರುವ ಸಂದರ್ಭಗಳೂ ಕೂಡ ಇದೆ. ತುಮಕೂರು ಜಿಲ್ಲೆಯಲ್ಲಿ ಇದನ್ನು ನೋಡಬಹುದು. ಈ ರೀತಿಯ ತೆರಿಗೆ ಮಸೂದೆ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಬಳ್ಳಿಯದಲ್ಲ, ಮಾನ್ಯ ಮಂತ್ರಿಗಳು ಇಷ್ಟರಲ್ಲೇ ಚುನಾವಣೆಯನ್ನು ಎದುರಿಸಬೇಕಾಗಿದೆ. ಈ ದೃಷ್ಟಿಯಿಂದ ಮತ್ತು ಸಾಮಾನ್ಯ ಜನರ ಹಿತದೃಷ್ಟಿಯಿಂದ ಈ ಮಸೂದೆಯನ್ನು ಸರಕಾರ ಪಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಮಾಡುತ್ತೇನೆ.

† ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಕಳೆದ ಐದು ವರ್ಷದಿಂದ ಈ ತೆರಿಗೆಗಳನ್ನು ಹಾಕುವ ವಿಧಾನವನ್ನು ವಿರೋಧಿಸುತ್ತಾ ಬಂದಿದ್ದೇವೆ. ಈ ತೆರಿಗೆಯನ್ನು ಹಾಕುವ ವಿಧಾನದಲ್ಲಿ ಎರಡು ತರಹ ಇದೆ. ಒಂದು ಡೈರೆಕ್ಟ್ ಟ್ಯಾಕ್ಸೇಷನ್

(ಶ್ರೀ ಬಿ. ಚನ್ನಬೈರೇಗೌಡ)

ಇನ್ನೊಂದು ಇನ್‌ಡೈರೆಕ್ಟ್ ಟಾಕ್ಸೇಷನ್. ಡೈರೆಕ್ಟ್ ಟ್ಯಾಕ್ಸೇಷನ್ ಏನೋ ವಿಚಾರ ಮಾಡಿದ್ದೇ ಆದರೆ ಅದು ಒಪ್ಪತಕ್ಕ ವಿಷಯ. ಈ ಇನ್‌ಡೈರೆಕ್ಟ್ ಟಾಕ್ಸೇಷನ್ ಒಳ್ಳೆಯದಲ್ಲ, ಈ ಸಾರಿ ಲಾರಿಗಳಮೇಲೆ 800 ರೂಪಾಯಿನಿಂದ ಸಾವಿರ ರೂಪಾಯಿಗಳವರೆಗೂ ಏರಿಸಿರುವುದು ಸರಕಿನಮೇಲೆ ಬೀಳುತ್ತದೆಯೇ ಹೊರತು ಲಾರಿಯ ಯಜಮಾನ ಮೇಲೆ ಆಗಲಿ, ವ್ಯಾಪಾರ ಮಾಡುವ ಸೀನಿನಮೇಲೆ ಆಗಲಿ ಬೀಳುವುದಿಲ್ಲ. ಇದು ಮೂಟೆಯಮೇಲೆ ಬೀಳುತ್ತದೆ, ಮಾಲಿನಮೇಲೆ ಬೀಳುತ್ತದೆ. ಕೊನೆಯಲ್ಲಿ ಪದಾರ್ಥವನ್ನು ಕೊಳ್ಳತಕ್ಕ ಕನ್‌ಸ್ಯೂಮರ್‌ಮೇಲೆ ಈ ತೆರಿಗೆ ಬೀಳುತ್ತದೆ. ಈ ರೀತಿ ಇನ್‌ಡೈರೆಕ್ಟ್ ಟ್ಯಾಕ್ಸ್ ಹಾಕುವುದರಿಂದ ಅದರ ದುಷ್ಪರಿಣಾಮ ಸುಮಾರು 180 ಲಕ್ಷ ರೂಪಾಯಿಗಳವರೆಗೂ ಕನ್‌ಸ್ಯೂಮರ್ಸ್ ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಪದಾರ್ಥಗಳನ್ನು ಉಪಯೋಗಮಾಡತಕ್ಕ ಸಾಮಾನ್ಯ ಬಡ ಜನರು ಈ ತೆರಿಗೆಯನ್ನು ಕೊಡಬೇಕಾಗುತ್ತದೆ, ಆದ್ದರಿಂದ ಇದನ್ನು ಹಿಂದಕ್ಕೆ ತೆಗೆದುಕೊಂಡು ಇದರಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಕಾರುಗಳಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಇದೇನೋ ನಮಂಜಸವಾಗಿದೆ, ಒಂದು ಕಾರಿಗಿಂತ ಹೆಚ್ಚು ಕಾರುಗಳನ್ನು ಇಟ್ಟುಕೊಂಡಿದ್ದರೆ ಅದಕ್ಕೆ ತಕ್ಕಂತೆ ಡಬ್ಬರ್, ಟ್ರಿಬ್ಬರ್ ಟ್ಯಾಕ್ಸ್ ಕೊಡಬೇಕಾಗುತ್ತದೆ, ಅದು ನೇರವಾಗಿ ಸಾವುಕಾರರ ಮೇಲೆ ಬೀಳುತ್ತದೆ. ಒಟ್ಟಿನಲ್ಲಿ ಈ ಇನ್‌ಡೈರೆಕ್ಟ್ ಟ್ಯಾಕ್ಸೇಷನನ್ನು ನಾನು ವಿರೋಧಿಸುತ್ತೇನೆ. 2500 ಕೆ. ಜಿ. ಮೇಲೆ 37½ ರೂಪಾಯಿಗಿಂತ ಜಾಸ್ತಿ ಕೊಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಲಂಚಕ್ಕೆ ಸ್ವಲ್ಪ ಅವಕಾಶವಾಗುತ್ತದೆ, ಪ್ರತಿಯೊಂದು ಲಾರಿಯನ್ನೂ ವೇ ಬ್ರಿಡ್ಜ್‌ಮೇಲೆ ತೆಗೆದು ಕೊಂಡು ಹೋಗಿ ನಿಲ್ಲಿಸಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವ ಹಾಗೆ ಆಗುವುದಿಲ್ಲ. ಪರ್ಮಿಟ್ ತೆಗೆದು ಕೊಳ್ಳುವುದಕ್ಕೆ ಮುಂಚೆಯೇ ಮಾಲೀಕ ಎಷ್ಟು ಟನ್ ಹಾಕುತ್ತೇನೆ ಅಂತ ಹೇಳಿ ಡಿಕ್ಲೇರ್ ಮಾಡಿರುತ್ತಾನೆ. ಪ್ರತಿ ನಿತ್ಯ ತೂಕ ಮಾಡಬೇಕಾಗಿಲ್ಲ. ಕ್ವಾರ್ಟರ್‌ಲಿ ಟ್ಯಾಕ್ಸ್ ಕಟ್ಟುವುದು ತಮಗೆ ಗೊತ್ತಿದೆ. ಆದ್ದರಿಂದ ಆ ಪ್ರಶ್ನೆ ಬರುವುದಿಲ್ಲ.

Mr. SPEAKER.—Now that the members are passing a large number of small Bills, a request has come for discussion of the Public Service Commission Report. I believe it has been discussed in the Council. Would members like to discuss the report here ?

Sri K. LAKKAPPA.—Yes.

Mr. SPEAKER.—Then I will put it down for tomorrow. Sri G. V. Gowda will move the motion. I have also to announce, that I have extended the time for this Bill by half an hour.

ಶ್ರೀ ಬಿ. ಚನ್ನಬೈರೇಗೌಡ.—ಕಾರ್‌ಮೇಲೆ ಟ್ಯಾಕ್ಸ್ ಹೆಚ್ಚು ಮಾಡುತ್ತಾ ಇದ್ದೀರಿ, ಅದನ್ನು ಸ್ವಾಗತ ಮಾಡುತ್ತೇನೆ. ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸೇಷನನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಈಗ ತಂದಿರತಕ್ಕ ಬಿಲ್ಲು ನಮ್ಮ ಸ್ನೇಹಿತರಾದ ಲಕ್ಕಪ್ಪನವರು ಹೇಳಿದ ಹಾಗೆ ತೆರಿಗೆಗಳ ಮೇಲೆ ತೆರಿಗೆಗಳನ್ನು ಹಾಕುವುದರಿಂದ ಕನ್‌ಸ್ಯೂಮರ್ಸ್ ಕೊಳ್ಳತಕ್ಕ ಪದಾರ್ಥಗಳ ಮೇಲೆ ಬೀಳುತ್ತದೆಯೇ ಹೊರತು ಅವನಿಗೆ ಇನ್ನಾವ ಪ್ರಯೋಜನವೂ ಆಗುವುದಿಲ್ಲ. ಮಾನ್ಯ ಸಚಿವರಿಗೆ ನಾನು ಹೇಳುವುದೇನೆಂದರೆ, ಬೇರೆ ತರಹದಲ್ಲಿ ಪೋಲಾಗುತ್ತಾ ಇರತಕ್ಕ ಹಣವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿ. ಅವರಿಗೇ ಗೊತ್ತಿರುವಂತೆ ಎಂ. ಎಸ್ ಆರ್. ಟಿ.ಸಿ. ಯಲ್ಲಿ ಎಷ್ಟೋ ಜನ ಬಸ್ ಕಂಡಕ್ಟರ್‌ಗಳು, ಬಸ್ ಡ್ರೈವರ್‌ಗಳು 50 ಸಾವಿರ ಲಕ್ಷ ರೂಪಾಯಿಗಳ ಮನೆಗಳನ್ನು ಕಟ್ಟಿಸಿದ್ದಾರೆ. ಇಷ್ಟು ಹಣ ಹೇಗೆ ಲೀಕೇಜ್ ಆಯಿತು ? ಇದನ್ನು ತಡೆಗಟ್ಟುವುದು ಹೇಗೆ ಎಂಬುದನ್ನು ವಿಚಾರ ಮಾಡಬೇಕು. ಇಷ್ಟು ಹಣ ಮಧ್ಯವರ್ತಿ ಜನ ಹೊಡೆಯುವುದನ್ನು ತಡೆಗಟ್ಟಿದರೆ 18 ಅಲ್ಲ 36 ಲಕ್ಷ ರೂಪಾಯಿಗಳನ್ನಾದರೂ ಕೂಡ ನುಲಭವಾಗಿ ಉಳಿತಾಯ ಮಾಡಬಹುದು ಎಂದು ನಾನು ಸಲಹೆ ಮಾಡುತ್ತೇನೆ. ಅದೇ ರೀತಿ ಈ ಇರಾಖೆಯಲ್ಲಿ ವಿಪರೀತವಾಗಿ ಖರ್ಚು ಮಾಡುತ್ತಾ ಇದ್ದಾರೆ, ಮಿತವ್ಯಯವನ್ನು ಸಾಧಿಸಬೇಕು. ಬೇರೆ ಇರಾಖೆಗಳಲ್ಲಿ ಕೆಲಸ ಮಾಡತಕ್ಕವರ ಹತ್ತಿರ ಒಂದು ಎರಡು ರೂಪಾಯಿ ಕೂಡ ಇರುವುದಿಲ್ಲ ; ಪೋಲೀಸು ಮತ್ತು ತಮ್ಮ ಡಿಪಾರ್ಟ್‌ಮೆಂಟಿನವರ ಹತ್ತಿರ ಇದಕ್ಕೆ ಯಾವ ಕೊರತೆಯೂ ಇಲ್ಲ ಎಂದು ನಾನು ಘಂಟಾಘೋಷವಾಗಿ ಹೇಳ

ತ್ತೇನೆ. ಹೆವಿ ವೆಹಿಕರ್ಸ್ ಇರುತ್ತವೆ, ಸ್ಮಿಂಗ್ಸ್ ಮತ್ತು ಇತರ ಆಕ್ಸ್‌ಸರೀಸ್‌ಗೆ ಬೇಕಾದಷ್ಟು ದುಡ್ಡು ಕೊಡಬೇಕಾಗುತ್ತದೆ. ಒಂದಕ್ಕೆ ಎರಡರಷ್ಟು ಖರ್ಚು ಮಾಡಬೇಕಾಗುತ್ತದೆ. ಕೆಲವು ದೇಶಗಳಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನವರೇ ರಸ್ತೆಗಳನ್ನೆಲ್ಲಾ ವಹಿಸಿಕೊಂಡಿದ್ದಾರೆ. ನೀವು ಇಲ್ಲಿ ಟ್ಯಾಕ್ಸ್ ಎಲ್ಲಾ ತೆಗೆದುಕೊಳ್ಳುತ್ತೀರಿ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಯಾವ ರಸ್ತೆಯನ್ನೂ ಸರಿಮಾಡುವುದಿಲ್ಲ, ಒಟ್ಟಿನಲ್ಲಿ ಜನಗಳಿಗೆ ಯಾವ ಪ್ರಯೋಜನವೂ ಆಗುತ್ತಾ ಇಲ್ಲ. ಒಟ್ಟಿನಲ್ಲಿ ರಸ್ತೆಗಳನ್ನು ಉತ್ತಮ ಮಾಡುವುದಕ್ಕೆ ಇದನ್ನು ಉಪಯೋಗ ಮಾಡುವುದಾದರೆ ಈ ತೆರಿಗೆ ಹಾಕುವುದನ್ನು ಒಪ್ಪುತ್ತೇನೆ.

4-00 P.M.

ಹಣವನ್ನು ರಸ್ತೆ ಸೌಕರ್ಯಕ್ಕೆ ಉಪಯೋಗಿಸುವುದಾದರೆ 18 ಲಕ್ಷವಲ್ಲ 36 ಲಕ್ಷ ಬೇಕಾದರೂ ಹಾಕಲಿ, ಅದಕ್ಕೆ ನಾನು ಬೇಡ ಎಂತ ಹೇಳುವುದಿಲ್ಲ. ಈ ದಿವಸ ಕಾರಿನ ಮೇಲೆ ತೆರಿಗೆಹಾಕಿದ್ದಾರೆ ಅದನ್ನೂ ನಾನು ಬೇಡ ಎನ್ನುವುದಿಲ್ಲ. ನಾನು ಕೇಳುತ್ತಿರುವುದು ಟ್ಯಾಕ್ಸಿಗಳ ಮೇಲೆ ಟ್ಯಾಕ್ಸ್ ಹಾಕಿದರೆ ನಮ್ಮಂಥ ಮಧ್ಯಮವರ್ಗದ ಜನರ ತಿರುಗಾಟಕ್ಕೆ ಬಹಳ ತೊಂದರೆಯಾಗುತ್ತದೆ. ಏಕೆಂದರೆ, ಸರ್ಕಾರದವರು ಟ್ಯಾಕ್ಸ್ ಹಾಕಿದರೆ ಅವರು ಅದನ್ನು ನಮ್ಮ ಮೇಲೆ ಹಾಕುತ್ತಾರೆ. ಆಗ ನಾವು ಜಾಸ್ತಿ ದರವನ್ನು ಟ್ಯಾಕ್ಸಿಗಳವರಿಗೆ ಕೊಡಬೇಕಾಗುವುದು. ಈ ದಿವಸ 45 ಪೈಸೆ ಇರತಕ್ಕದ್ದು ನಾಳೆ ಟ್ಯಾಕ್ಸ್‌ಹಾಕಿದ ಮೇಲೆ 75 ಪೈಸಾಕ್ಕೆ ಏರುತ್ತದೆ. ಆದ್ದರಿದ ಸರ್ಕಾರದವರು ದಯವಿಟ್ಟು ಇದನ್ನು ಪುನರ್ವಿಮರ್ಶೆ ಮಾಡುವುದಕ್ಕಾಗಿ ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಟ್ಯಾಕ್ಸ್‌ಗಳನ್ನು ಹೆಚ್ಚಿಸುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇಂಥ ತೆರಿಗೆಗಳನ್ನು ಹಾಕುವುದರಿಂದ ಸರ್ಕಾರದವರು ತಮ್ಮ ಗೋರಿಯನ್ನು ತಾವೇ ತೋಡಿಕೊಂಡಹಾಗೆ ಆಗುತ್ತದೆ.

† ಶ್ರೀ ಗಂಗಾಧರನಾಪೋಷಿ (ಗುಲ್ಬರ್ಗ).—ಸ್ವಾಮಿ, ನಮ್ಮ ಮೈಸೂರು ಪ್ರದೇಶದಲ್ಲಿ ಸಂಚಾರಕ್ಕೆ ಸರಿಯಾದ ರೈಲ್ವೆ ಸೌಕರ್ಯಗಳು ಇಲ್ಲದಿರುವುದರಿಂದ ನಮಗೆ ಬೇಕಾದ ಎಲ್ಲಾ ಸಾಮಾನುಗಳೂ ಈ ದಿವಸ ರಾರಿಯಲ್ಲೇ ಬರಬೇಕಾಗಿದೆ. ಹೀಗಾಗಿ ಇದರಿಂದ ಡೀಸೆಲ್ ಆಯಿಲ್ ಮತ್ತು ಟೈರ್ಸ್ ಇವುಗಳ ಧಾರಣೆ ಜಾಸ್ತಿಯಾಗಿರುವುದರ ಜೊತೆಗೆ ಬ್ಲ್ಯಾಕ್‌ಮಾರ್ಕೆಟ್ಟಿನ ಬೆಲೆಯನ್ನು ಬೇರೆ ಕೊಡಬೇಕು. ಇದರಿಂದ ಈಗಾಗಲೇ ಸಾಮಾನು, ಸಂಚಾರಗಳ ದರಗಳು ಬಹಳವಾಗಿ ಏರುತ್ತವೆ. ಆದಕಾರಣ ನಮ್ಮಲ್ಲಿ ಎಲ್ಲಾ ಭಾಗಕ್ಕೂ ಒಳ್ಳೆಯ ರೈಲ್ವೆ ಸೌಕರ್ಯ ಒದಗುವತನಕ ಸರ್ಕಾರದವರು ವಾಹನ ತೆರಿಗೆಗಳನ್ನು ಹಾಕಬಾರದು ಎಂತ ಹೇಳುತ್ತಿದ್ದೇನೆ. ಸರ್ಕಾರದವರು ಏನು ಟ್ಯಾಕ್ಸನ್ನು ಏರಿಸಿದರೂ ಆದು ಜನರಮೇಲೇ ಬೀಳುತ್ತದೆ. ಹೀಗೆ ಜನರ ಜೇಬನ್ನು ಕತ್ತರಿಸುವುದಕ್ಕೆ ಅವರಿಗೆ Seven O'Clock ಬ್ಲೇಡನ್ನು ಕೊಡಬೇಡಿ, ಇದನ್ನು ದಯವಿಟ್ಟು ವಾಪಸ್ಸುತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri K. S. SURYANARAYANA RAO (Mysore).—Mr. Speaker, Sir, I join with my other friends in opposing this Bill on the ground that the hon. Minister when piloting the last Bill, held out an assurance that that would be the last in the current list. But before the year is out, we are receiving the second instalment of taxation. Possibly before Elections, we may have the third instalment also by way of Ordinance, because they want funds to push through so many things for the sake of winning elections. They profess to pilot so many programmes for all-sided development, in the name of planning. By enhancement of taxation, does the Minister not concede that the other sectors are affected with the cost on the other articles going up? Every now and then the poor man, the common man is told to tighten his belt. How long should he suffer? This indirect taxation is mounting up like anything. Every one concedes that in a Welfare State indirect taxation should be as limited as possible; it should be kept as minimum as possible and substituted by direct taxation. This appears to be a direct taxation on the owner of the vehicle. But it is passed on to the

(SRI K. S. SURYANARAYANA RAO)

consumer. The owner does not pay it because if he is now charging one rupee for transportation, he will raise it to Rs. 1-50 on the ground that taxes have been raised. Prices of all articles have gone up on account of scarcity. Devaluation has also been responsible for the rise in prices. We have been pressing time and again that high taxation is one of the most important contributory factors for the rise in prices. Till today Government have not thought of it at all. If today food articles are sold at exorbitant prices, it is not because the higher cost is paid to the grower; the intermediary cost will be much more than what the actual grower receives. We understand that the intention is that the benefit should go to the consumer or the producer. On the contrary, the intermediary takes away the major portion of the cost. Is this planning? By raising taxation here, you are raising the cost in other sectors.

Sri D. DEVARAJ URS.—I would like to ask him if he is so keen on eliminating the intermediaries. Does he tell us that everything should be nationalised, even the food trade?

Mr. SPEAKER.—There has been enough debate on the Bill. We are entering into controversies beyond the terms of the Bill. Nationalisation of food is not in the Bill. The hon'ble member may please come to the point.

Sri K. S. SURYANARAYANA RAO.—That is one way of bringing down prices actually. By reducing the overhead charges, the cost can be brought down. Costs were going up because of scarcity conditions and failure of monsoon. We had good monsoon and prices of articles of food were tending to come down. Likewise, if there is less taxation, transport cost will be very much less and the prices of commodities will also be less. Otherwise with every increase in the total target of the Plan—whether it is Rs. 250 crores for the Third Plan, Rs. 500 crores for the Fourth Plan, Rs 1,000 crores for the Fifth Plan, the cost automatically shoots up in proportion to the size of the plan. This is not planning. This is not my personal opinion or experience. Experts have stated that the costs have gone up. Even at the latest Conference of the Transport Operators where the Minister was present, it was urged that the working cost and charges should be reduced. Are we giving heed to the expert opinion? No. They are taxing the people more and more to fill the coffers for their own purpose. I would request the Government to think about the whole matter and drop this Bill for the present. Should the prices of commodities come down and should there be scope for further thinking on taxation, let us do it at a later stage. However, this is not the stage when we can introduce further taxation. It has been said in expert reports that Mysore State is the only State where there has been taxation on all possible imaginary items permissible under the Constitution. If this state of affairs continue, I do not know where we are being led to.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯಸಾರಿಗೆ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಮೋಟಾರು ವಾಹನಗಳ ಮೇಲೆ ತೆರಿಗೆಯನ್ನು ಹಾಕತಕ್ಕ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಈಗಾಗಲೇ ರಾರಿ, ಟ್ಯಾಕ್ಸಿ ಇತ್ಯಾದಿ ವಾಹನಗಳ ಮೇಲೆ ಅನೇಕ ತೆರಿಗೆಗಳನ್ನು ಹಾಕಿ ಅವುಗಳನ್ನು ಇಟ್ಟುಕೊಂಡು ಕೆಲಸ ಮಾಡತಕ್ಕವರ ಬೆನ್ನುಮೂಳೆಯನ್ನು ಸರ್ಕಾರದವರು ಮುರಿದಿದ್ದಾರೆ. ಎಷ್ಟೋ ಜನ ರಾರಿ ಓನರುಗಳು ಈಗಾಗಲೇ ವಾನರರುಗಳಾಗಿದ್ದಾರೆ. ಈಗಲೇ 1200 ರೂಪಾಯಿ ಮೂರು ತಿಂಗಳಿಗೆ ಕೊಡುತ್ತಾರೆ. ವರ್ಷಕ್ಕೆ 4800 ಆಯಿತು. ಡೀಸೆಲ್ ಮೇಲೆ ತೆರಿಗೆ ಹಾಕಿದ್ದೀರಿ. ಸ್ಪೇರ್ ಪಾರ್ಟ್ಸ್‌ಗಳು ಈ ದೇಶದಲ್ಲಿ ಸಿಗುವುದಕ್ಕೆ ಸರ್ಕಾರದವರು ಏನೂ ವ್ಯವಸ್ಥೆ ಮಾಡಿಲ್ಲ. ಟೈರ್ ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಿಲ್ಲ. ರಾರಿ ಮಾಲೀಕನಿಗೆ ರಾರಿ ಕೊಂಡುಕೊಳ್ಳಲು ಸರ್ಕಾರದವರು ಏನೂ ವ್ಯವಸ್ಥೆ ಮಾಡಿಲ್ಲ. ರಾರಿ ಕೊಳ್ಳುವಾತ ಸಿಂಡಿಕೇಟ್ ಬ್ಯಾಂಕಿಗೆ ಹೋಗಿ ಅವರು ಕೇಳಿದಷ್ಟು ಬಡ್ಡಿ ಕೊಟ್ಟು ಆ ಹಣದಿಂದ ರಾರಿ ಕೊಂಡುಕೊಳ್ಳುತ್ತಾನೆ. ದುಡಿದಿದ್ದನ್ನೆಲ್ಲಾ ಬ್ಯಾಂಕಿನವರಿಗೆ ಕೊಟ್ಟು ಕೊನೆಗೆ ಒಂದು ದಿನ ಎಕ್ಸ್ ರಾರಿ ಮಾಲೀಕನಾಗುತ್ತಾನೆ. ಇದನ್ನು ನಾವು ನೋಡುತ್ತಿದ್ದೇವೆ. 800ರಿಂದ 1200ರರವರೆಗೆ ದರವನ್ನು ಇಟ್ಟು ಕೊಂಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಎರಡು ಕಾಲಮ್‌ನಲ್ಲಿರುವುದು ಬೇರೆ ಬೇರೆ, 800 ನ್ಯೂ ಮ್ಯಾಟಿಕ್ ಟೈರ್ಸ್ ಇರುವ ಗಾಡಿಗಳಿಗೆ, 1,200 ಇತರ ಗಾಡಿಗಳಿಗೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದು ಆದಮೇಲೆ 12 ಸಾವಿರ ಕಿಲೋಗ್ರಾಮ್‌ಗೆ ಅಂದರೆ ಪ್ರತಿ 250 ಕಿಲೋಗ್ರಾಮ್ಸ್‌ಗೆ 37 ರೂಪಾಯಿ 50 ಪೈಸೆ ಹಾಕುತ್ತಾ ಹೋಗುವುದೆಂದು, ಹೊರಗಡೆಯವರು ಇಟ್ಟುಕೊಂಡಿರುವ ಕಾರಿನ ಮಾಲಿಕರಿಗೂ ಹೆಚ್ಚಿಸಬೇಕೆಂದು ಹೇಳಿದ್ದಾರೆ. ಮಾನ್ಯ ಸಚಿವರು ಈ ಮಸೂದೆಯ ಬಗ್ಗೆ ಸದಸ್ಯರು ಹೊರಗಡೆ ಹೋಗಿ ಮಾತನಾಡುತ್ತಾರೆಂದು ತಿಳಿಸುತ್ತಾರೆ. ಮಾನ್ಯ ಅಧ್ಯಕ್ಷರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದಿದ್ದೇನೆ. ಈ ರೀತಿ ಬರುವ ಹೆಚ್ಚಿನ ಹಣ ಎಲ್ಲೆಲ್ಲಿಗೆ ಹೋಗುತ್ತದೆ ಎಂದು ಕೇಳಿದರೆ ನಾಲ್ಕನೆ ಪಂಚವಾರ್ಷಿಕ ಯೋಜನೆಗೆ ಹಣವನ್ನು ಹುಡುಕುತ್ತಿದ್ದೇವೆ, ಅದಕ್ಕಾಗಿ ಈ ರೀತಿ ಹೆಚ್ಚಿಸುತ್ತಿದ್ದೇವೆಂದು ಹೇಳಿದರು. ಬೆಳಿಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಉಪ ಪ್ರಶ್ನೆಯನ್ನು ಹಾಕಿದೆ, ಒಂದು, ಎರಡು ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿ ನೀವು ವಹಿಸಿದ ಧೋರಣೆ ಮತ್ತು ಅವರ ಫಲವನ್ನು ಗಮನಿಸಿ ನಾಲ್ಕನೇ ಯೋಜನೆಯನ್ನು ಏನಾದರೂ ಬದಲಾವಣೆ ಮಾಡಿದ್ದೀರಾ ಎಂದು. ಅದಕ್ಕೆ ಅವರಿಗೆ ಬಹಳ ಕೋಪ ಬಂತು. ಬಹಳ ವಿವೇಚನೆಯಿಂದ ಮಾಡುತ್ತೇವೆ ಎಂದು ಹೇಳಿದರು. ಅವರು ತಪ್ಪು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಒಂದು, ಎರಡು, ಮತ್ತು ಮೂರು ಯೋಜನೆಗಳು ಮುಗಿಯುವ ಹೊತ್ತಿಗೆ ನಿಮ್ಮ ಆರ್ಥಿಕ ಪರಿಸ್ಥಿತಿ, ನೀವು ತೆರಿಗೆ ಹಾಕತಕ್ಕಂಥ ಕ್ರಮ, ತೆರಿಗೆ ಕೊಡುವ ಶಕ್ತಿಯೆಲ್ಲಾ ಅಪಾಯಕರ ಸ್ಥಿತಿಗೆ ಮುಟ್ಟಿದೆ. ನಾನು ರಾರಿ ಮಾಲಿಕರ ಪರವಾಗಿ ಮಾತನಾಡುತ್ತೇನೆಂದು ಭಾವಿಸಬಾರದು. ಮಾನ ಮಂತ್ರಿಗಳಿಗೆ ತತ್ವಗಳಲ್ಲಿ ನಂಬಿಕೆಯಿದ್ದರೆ ಒಂದು ಮಾತನ್ನು ಹೇಳುತ್ತೇನೆ. ತಾವು ಮಂತ್ರಿಗಳಾದ ಮೇಲೆ ಜನರು ಓಡಾಡುವ ವಾಹನಗಳನ್ನು ರಾಷ್ಟ್ರೀಕರಣ ಮಾಡಿದ ರೀತಿ ಈ ರಾರಿಗಳನ್ನು ರಾಷ್ಟ್ರೀಕರಣ ಮಾಡಬಹುದಿತ್ತು. ಅದಕ್ಕೆ ಪಣಂ ಇಲ್ಲ ಎಂದು ಹೇಳಿದಿರಿ. ಚಾಸಿಗಳು ಸಿಗುತ್ತಿಲ್ಲವೆಂದು ಹೇಳಿದಿರಿ. ಹಣವಿಲ್ಲವೆಂದು ಹೇಳಿದಿರಿ. ಈಗಾಗಲೇ ರಾರಿ ಮಾಲಿಕರಾಗಿರುವವರು ಹೆಚ್ಚು ಕಡಮೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ, ಸ್ಟೇಟ್ ಕಾಂಗ್ರೆಸ್ ಕಮಿಟಿಯನ್ನು ಹಿಡಿದುಕೊಂಡುಬಿಟ್ಟಿದ್ದಾರೆ. ಆದ್ದರಿಂದ ರಾರಿಗಳನ್ನು ತಾವು ತೆಗೆದು ಕೊಂದು ನ್ಯಾಷನಲೈಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ಇನ್ನೊಂದು ಮಸೂದೆಯು ಬಂದಾಗ ಮಾತನಾಡುತ್ತೇನೆ. ಈ ಸರ್ಕಾರದವರಿಗೆ ನಮಾಜವಾದದ ಮೇಲೆ ನಂಬಿಕೆ ಇದ್ದರೆ ರಸ್ತೆ ಸಾರಿಗೆಯನ್ನು ಕೂಡ ರಾಷ್ಟ್ರೀಕರಿಸಬೇಕಾಗುತ್ತದೆ; ಅದನ್ನು ಖಾಸಗೀ ಮಾಲೀಕತ್ವದಲ್ಲಿ ಬಿಡುವುದಕ್ಕಾಗುವುದಿಲ್ಲ. ಆದರೆ ಈಗ ತಾವು ಏನು ರಾಷ್ಟ್ರೀಕರಣ ಮಾಡಿ ನಡೆಸುತ್ತಿದ್ದೀರಿ, ಈ ಕ್ರಮದಲ್ಲಿ ನಡೆಸುವುದಾದರೆ ಅದು ಸರಿಯಾದ ಕ್ರಮವಾಗಿ ಕಾಣುವುದಿಲ್ಲ. ಖಾಸಗೀ ಜನರ ಜೀವನದ ಮೇಲೆ ಕಲ್ಲು ಹಾಕಬೇಡಿ ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರುಗಳು ಈಗಾಗಲೆ ಇದರ ಬಗ್ಗೆ ಮಾತನಾಡಿದ್ದಾರೆ. ನಾನು ಪುನಃ ಅದನ್ನೆಲ್ಲಾ ಪುನರ್ ವಿಮರ್ಶೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದು ನೇರವಾದ ತೆರಿಗೆ. ಇದನ್ನು ಕೊಡುವ ಸಾಮರ್ಥ್ಯವಿರುವ ಜನರಿಗೆ ಹಾಕಬೇಕು. ಇವತ್ತು ಶ್ರೀ ನಾಮೋಷಿಯವರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ರೈಲ್ವೆ ಬ್ಯಾಡ್‌ಗೇಜ್ ಬಹಳ ವಿಶಿಯಲ್ಲಿದೆ. ದಿನ ನಿತ್ಯದ ಅವಶ್ಯಕ ವಸ್ತುಗಳು ರಾರಿಗಳ ಮೂಲಕವೇ ನಮ್ಮ ರಾಜ್ಯಕ್ಕೆ ಹೊರಗಿನಿಂದ ಬರಬೇಕು, ಹೋಗಬೇಕು.

(ಶ್ರೀ ಎಸ್. ಗೋಪಾಲಗೌಡ)

ಈ ರಾರಿ ಮಾಲೀಕರೆಲ್ಲಾ ನಮ್ಮ ಕೈಲಿದ್ದಾರೆ, ಎಲ್ಲ ಬೇಕಾದರೂ ಚೆಕ್ ಮಾಡಬಹುದು, ಇವರಿಗೆ ತೆರಿಗೆ ಕೊಡುವ ಸಾಮರ್ಥ್ಯವಿದೆಯೆಂದು ಭಾವಿಸಿದ್ದೀರಿ. ಆ ಭಾವನೆ ತಪ್ಪು. ಈ ಮೂಲಕ 18ಲಕ್ಷ ರೂಪಾಯಿ ಬರುತ್ತದೆಂದು ಅಂದಾಜು ಮಾಡಿದ್ದೀರಿ. ಅದು ಕರಾರುವಾಕ್ಕಾಗಿ ಆಗುತ್ತದೋ 18ಲಕ್ಷವೇ ಬರುತ್ತದೋ, ಒಂದು ಕೋಟಿ 80ಲಕ್ಷ ಬರುತ್ತದೋ ಗೊತ್ತಿಲ್ಲ. ಸರ್ಕಾರದವರು ಅಂದಾಜು ಕೆಲವು ಸಲ ಸರಿಯಾಗಿರುವುದಿಲ್ಲ. ಇದರ ಬಗ್ಗೆ ವಿವಾದ ಮಾಡುವುದಕ್ಕೆ ಹೋಗುವುದಿಲ್ಲ. ಹೊಸ ತೆರಿಗೆ ಹಾಕುವುದು, ಇರುವ ತೆರಿಗೆಯನ್ನು ಹೆಚ್ಚಿಸುವುದು ಸರಿಯಲ್ಲ. ಸಾರಿಗೆ ವಸ್ತುಗಳ ಸಾಗಾಣಿಕೆಯ ಮೇಲೆ, ಲಾರಿ ಟ್ರಕ್‌ಗಳ ಮೇಲೆ ಹೆಚ್ಚು ತೆರಿಗೆ ಹಾಕಬೇಕೆಂದು ಇದ್ದರೆ, ನಮ್ಮ ರಾಜ್ಯದಲ್ಲಿ ಹೆಚ್ಚು ಉತ್ಪಾದನೆಯಿರಬೇಕು ಮತ್ತು ಸಾರಿಗೆ ವ್ಯವಸ್ಥೆ ಆದಷ್ಟು ಹೆಚ್ಚು ಬೆಳೆದಿರಬೇಕು. ಬೆಲೆಗಳ ಏರುಪೇರಿಗೆ ಇದು ಬಹಳ ಮುಖ್ಯವಾದ ಅಂಶವಾಗುತ್ತದೆ. ನಾವು ಗುಡ್ಸ್ ರೈಲಿಗಾಗಲೀ, ಲಾರಿಗಳಿಂದ ಟ್ರಾನ್ಸ್‌ಪೋರ್ಟ್ ಮಾಡುವಾಗಾಗಲೀ ಏನು ಬಾಡಿಗೆಗಳನ್ನು ತೆರುತ್ತೇವೋ ಅದೂ ಒಂದು ಮುಖ್ಯ ಕಾರಣವಾಗುತ್ತದೆ. ಈ ವಿಚಾರವನ್ನು ಮಾನ್ಯ ಸದಸ್ಯರು ಕೆಲವರು ವಿವರವಾಗಿ ಹೇಳಿದ್ದಾರೆ. ಈ ಕಾರಣದಿಂದ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಈಗಾಗಲೇ ಹಾಕಿರತಕ್ಕ ತೆರಿಗೆಗಳನ್ನು ಒಳ್ಳೆಯ ರೀತಿಯಲ್ಲಿ ಸರ್ಕಾರಕ್ಕೆ ವಸೂಲಿಮಾಡಿಕೊಂಡು ಸರ್ಕಾರದಲ್ಲಿ ಇವತ್ತು ನಡೆಯುತ್ತಾ ಇರತಕ್ಕ ದುಂದು ವೆಚ್ಚಗಳನ್ನು ಮತ್ತು ದುಬಾರಿ ವೆಚ್ಚಗಳನ್ನು ಕ್ಯೆಬಿಟ್ಟು ಹಣವನ್ನು ಉಳಿತಾಯಮಾಡಿ ಕೆಟ್ಟುಹೋಗಿರುವ ರಸ್ತೆಗಳನ್ನು ಚೆನ್ನಾಗಿ ರಿಪೇರಿಮಾಡಿಸುವುದು, ಸಾರಿಗೆ ಇರಾಬೆ ಸಂಬಂಧಪಟ್ಟ ವರಿಗೆ ನೆರವು ಕೊಡುವುದು—ಇಂಥಾದ್ದನ್ನು ಸರ್ಕಾರದವರು ಮಾಡಬೇಕೆಂದು ಸಲಹೆಮಾಡಿ ಮತ್ತೊಮ್ಮೆ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, 1966ನೇ ಇಸವಿಯ ಮೋಟಾರ್ ವೆಹಿಕಲ್ಸ್ (ಮೈಸೂರು ತಿದ್ದುಪಡಿ) ಮಸೂದೆಯ ಮೇಲೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ಮಸೂದೆಯ ಒಂದು ಭಾಗವನ್ನು ಬಿಟ್ಟು ಮೋಟಾರುವಾಹನಗಳ ಮೇಲೆ ಇನ್ನೂ ಹೆಚ್ಚಿಗೆ ತೆರಿಗೆಯನ್ನು ಹಾಕಬಹುದು ಎಂಬುದಾಗಿ ಹೇಳಿದ್ದಾರೆ. ಹಿಂದೆಯೂ ಈ ವಿಚಾರದಲ್ಲಿ ತೆರಿಗೆಯನ್ನು ಹೆಚ್ಚಿಸಬಹುದು ಎಂಬುದಾಗಿ ಹೇಳಿದ್ದರು. ಆದರೆ ಶ್ರೀಮಾ ಗೋಪಾಲಗೌಡರು ಈ ವಿಚಾರವನ್ನು ಮೊಗಂ ಆಗಿ ಹಾಗೆಯೇ ಇಟ್ಟರು. ಅದನ್ನು ಅವರು ಒಪ್ಪಿದ್ದಾರೆಯೋ ಇಲ್ಲವೋ ಎಂಬುದನ್ನು ನಮ್ಮ ಊಹೆಗೇ ಬಿಟ್ಟಿದ್ದಾರೆ. ಸಾಮಾನುಗಳ ಸಾಗಾಣಿಕೆ ವಿಚಾರವನ್ನು ಮಾತ್ರ ಅವರು ಹೇಳಿ ಮೋಟಾರು ವಾಹನಗಳ ವಿಷಯವನ್ನು ನಮ್ಮ ಊಹೆಗೇ ಬಿಟ್ಟಿದ್ದಾರೆ. ಆದರೂ ಈ ತಿದ್ದುಪಡಿಯನ್ನು ಅವರು ಒಪ್ಪಿದ್ದಾರೆಂದು ನಾನು ಭಾವಿಸುತ್ತೇನೆ. ಅವರ ಒಂದು ಸಮಾಜವಾದದ ತತ್ವಕ್ಕೆ ಅವರ ಒಪ್ಪಿಗೆಯನ್ನು ಕೊಡದಿದ್ದರೆ ವಿರೋಧವಾಗುತ್ತದೋ ಏನೋ ಎಂದು ಇರುವುದರಿಂದ ಮಾನ್ಯ ಸದಸ್ಯರು ಇದನ್ನು ಒಪ್ಪುತ್ತಾರೆಂದು ನಾನು ತಿಳಿಯುತ್ತೇನೆ. ಸಾಮಾನು ಸರಂಜಾಮುಗಳ ಸಾಗಾಣಿಕೆ ಮಾಡುವ ವಾಹನಗಳ ವಿಚಾರದಲ್ಲಿ ಬಹಳ ಸಹಾನುಭೂತಿಯನ್ನು ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ತೆರಿಗೆ ಅವರಿಗೆ ಹೆಚ್ಚಾಗುತ್ತದೆ, ಅವರಿಗೆ ಬಹಳ ತೊಂದರೆ ಇದೆ ಸಾಮಾನುಗಳ ಬೆಲೆ ಹೆಚ್ಚಾಗುತ್ತಿದೆ ಇತ್ಯಾದಿ ವಿಚಾರಗಳ ಬಗ್ಗೆ ಮಾತನಾಡುತ್ತಾ ಪ್ಲಾನ್ ಹ್ಯೂನಸ್—ಹೀಗೆ ನಾನಾ ವಿಚಾರಗಳನ್ನು ಕೆಲವು ಮಾನ್ಯ ಸದಸ್ಯರು ಎತ್ತಿದ್ದಾರೆ. ಅವೆಲ್ಲಕ್ಕೂ ಉತ್ತರ ಕೊಡುವುದಕ್ಕೆ ಬಹುಶಃ ಸಮಯವಿಲ್ಲವೆಂದು ಕಾಣುತ್ತದೆ. ಮಾನ್ಯ ಸದಸ್ಯರು ಈಗ ತಿಳಿಯಬೇಕಾದುದು ಒಂದು ವಿಷಯವಿದೆ. ವರ್ಷೇ ವರ್ಷೇ ಇವರು ಹೇಳುವಂಥ ಚಿತ್ರವನ್ನು ನೋಡಿದರೆ ಮನಸ್ಸು ಕರಗುವ ರೀತಿಯಲ್ಲಿ ಅವರು ಹೇಳಿದ್ದಾರೆ. ವಾಹನಗಳ ಮಾಲೀಕರ ವಿಚಾರದಲ್ಲಿ ಸಹಾನುಭೂತಿಯನ್ನು ಸಹ ವ್ಯಕ್ತಪಡಿಸಿದ್ದಾರೆ. ಹಾಗೆ ನಿಜವಾಗಿ ಅವರಿಗೆ ಅಷ್ಟೊಂದು ಕಷ್ಟವಾಗಿದ್ದರೆ ಈಗ ವರ್ಷೇ ವರ್ಷೇ ವಾಹನಗಳು ಹೆಚ್ಚಾಗುತ್ತಿವೆಯೋ ಅಥವಾ ಕಡಿಮೆಯಾಗುತ್ತಿವೆಯೋ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು. ಈ ವರ್ಷ ನಮ್ಮಲ್ಲಿ ರಿಜಿಸ್ಟರ್ ಆಗಿರುವ ವಾಹನಗಳು ಸುಮಾರು 15 ಸಾವಿರ. ನಮ್ಮಲ್ಲಿ ಈಗ 15 ಸಾವಿರ ವಾಹನಗಳಿವೆ. ಪ್ರತಿ ವರ್ಷ 500-500 ರಂತೆ ವಾಹನಗಳು ನರಾಸರಿ ರಿಜಿಸ್ಟ್ರೇಷ್ ಹೆಚ್ಚುತ್ತಿದೆ. ಇದು ಏನು ತೋರಿಸುತ್ತದೆಂದರೆ, ಮಾನ್ಯ ಸದಸ್ಯರು ಇಲ್ಲಿ ಏನು ಟೀಕೆಮಾಡಿದರೋ ವಾಸ್ತವವಾಗಿ ಆ ರೀತಿ ಏನೂ ಇಲ್ಲ. ಹೆಚ್ಚು ಹೆಚ್ಚಾಗಿ ವಾಹನಗಳು ವರ್ಷೇ ವರ್ಷೇ ಬರುತ್ತಲೇ ಇವೆ. ಮಾನ್ಯ ಸದಸ್ಯರು ಇದನ್ನು ತಿಳಿಯಬೇಕು. ಈಗ ಯಾರು ಮಾಲೀಕರು ಇದ್ದಾರೆ ಅವರಿಗೆ ಒಂದುವೇಳೆ ಏನೂ ಫಾಯಿದೆ ಇಲ್ಲದೇ ಹೋಗಿದ್ದರೆ ಈ ರೀತಿಯಾಗಿ ಬಸ್ಸುಗಳ ಸಂಖ್ಯೆ ಹೆಚ್ಚುತ್ತಿರಲಿಲ್ಲವೆಂಬುದನ್ನು ಮಾನ್ಯ ಸದಸ್ಯರು ಮನಗಾಣಬೇಕು. ಇತ್ತೀಚೆಗೆ ವಾಹನಗಳ ಮೇಲೆ ತೆರಿಗೆಗಳು ವಿಪರೀತವಾಗಿ ಹೆಚ್ಚಿವೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ.

ಮಾನ್ಯ ಸದಸ್ಯರು ಇನ್ನೂ ಸ್ವಲ್ಪ ಚೆನ್ನಾಗಿ ಈ ಮಸೂದೆಯನ್ನು ಓದಿದ್ದರೆ ಈ ರೀತಿಯಾಗಿ ಟೀಕೆ ಮಾಡುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಕೆಲವರು ಏನು ತಿಳಿದುಕೊಂಡಿದ್ದಾರೆಂದರೆ, ಈ ವಾಹನಗಳನ್ನು ವೇಬ್ರಿಡ್ಜ್‌ಗೆ ತೆಗೆದುಕೊಂಡು ಹೋಗಿ ಅಲ್ಲಿ ತೂಕ ಮಾಡಿ ಎಷ್ಟು ಟನ್ ಇದೆಯೆಂಬುದನ್ನು ನೋಡಿ ಆಗಲೇ ತೆರಿಗೆಯನ್ನು ವಸೂಲು ಮಾಡುತ್ತಾರೆಂಬುದಾಗಿ ತಿಳಿದುಕೊಂಡು ಮಾತನಾಡಿದ್ದಾರೆ. ಅದು ಹಾಗಲ್ಲ. ನಾನು ಮೊದಲೇ ತಿಳಿಸಿದ್ದೇನೆ. ಪ್ರತಿಕ್ವಾರ್ಟರಿಗೊಂದು ಸಾರಿ ಕೊಡುವ ತೆರಿಗೆ ಇದು. ಯಾವುದಾದರೂ ಒಂದು ವಾಹನದ ಮಾಲೀಕರು, ತಮ್ಮ ವಾಹನದಲ್ಲಿ ಎಷ್ಟು ಭಾರವಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಾರೋ ಆದರ ಬಗ್ಗೆ laden weight ಡಿಕ್ಲೇರ್ ಮಾಡಿದ ಮೇಲೆ ತೆರಿಗೆಯನ್ನು ಗೊತ್ತುಮಾಡಿದ ಮೇಲೆ ಅದರಂತೆ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟೋ ಸಂದರ್ಭಗಳಲ್ಲಿ ವೇ-ಬ್ರಿಡ್ಜ್‌ನಿಂದ ಅನೇಕರು ತಪ್ಪಿಸಿಕೊಂಡು ಹೋಗುತ್ತಾರೆ. ಆದ್ದರಿಂದ ವೆ-ಬ್ರಿಡ್ಜ್‌ಗಳಲ್ಲ ಆಗತಕ್ಕ ಕೆಲಸಗಳೇ ಬೇರೆ.

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ಒಂದು ವಾಹನ 13-14ಟನ್ನುಗಳಷ್ಟು ಸಾಮಾನುಗಳ ಭಾರವಿದೆ ಎಂದು ಡಿಕ್ಲೇರ್ ಮಾಡಿ ತೆರಿಗೆಯನ್ನು ಅದಕ್ಕಿಂತ ಹೆಚ್ಚಿಗೆ ಕೊಂಡು ಹೋಗುತ್ತಿದ್ದಾರೆ ಅಂಥಾದ್ದನ್ನು ಕಂಡುಹಿಡಿಯುವುದಕ್ಕೆ ವೇ-ಬ್ರಿಡ್ಜ್ ಇದೆಯೇ ಹೊರತು ಬೇರೆ ಇನ್ನಾವುದಕ್ಕೂ ಇಲ್ಲ.

Sri C. J. MUCKANNAPPA.—Let him be an executive officer on the spot, he will come to know what it is.

ಶ್ರೀ ಡಿ. ದೇವರಾಜ ಅರಸ್.—1962ನೇ ಇಸವಿಯಲ್ಲಿ ಇದ್ದಂಥ ಕಾನೂನಿನಲ್ಲಿ ಇದೇ ರೀತಿಯಾಗಿ 12 ಸಾವಿರ ಕೆ. ಜಿ. ಗಿಂತ ಹೆಚ್ಚಿಗೆ ಸಾಮಾನುಗಳನ್ನು ವಾಹನಗಳಲ್ಲಿ ಹಾಕಿ ಸಾಗಿಸುವುದಾದರೆ ಆಗ 250 ಕೆ. ಜೆ. ಗೆ 25 ರೂಪಾಯಿಗಳಂತೆ ಕೊಡಬೇಕೆಂದಿತ್ತು. 1965 ನೇ ತಿದ್ದುಪಡಿ ಆಕ್ಟ್‌ಪ್ರಕಾರ ಅದುಬಿಟ್ಟು ಹೋಗಿತ್ತು. ಆ ರೀತಿ ಬಿಟ್ಟಿದ್ದರಿಂದ ಸ್ವಲ್ಪಮಟ್ಟಿಗೆ ನಮ್ಮ ಸರ್ಕಾರಕ್ಕೆ ಬರತಕ್ಕ ಉತ್ಪತ್ತಿಗೆ ಧಕ್ಕೆ ಉಂಟಾಯಿತು. ಕೆಲವು ವಾಹನಗಳು ಡಂಪರ್‌ನಿಂದ ಕೂಡಿದ್ದುದರಿಂದ ಒಂದು ಕ್ವಾರ್ಟರ್‌ಗೆ 1962 ನೇ ಆಕ್ಟ್‌ಪ್ರಕಾರ 5 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. 1965 ನೇ ಇಸವಿಯಲ್ಲ ಹಿಂದೆ ಇದ್ದಂಥ ಕೆಲವನ್ನು ತೆಗೆದದ್ದರಿಂದ 5 ಸಾವಿರ ರೂಪಾಯಿಗಳಿಗೆ ಬದಲಾಗಿ 800 ರೂಪಾಯಿಗಳು ಮಾತ್ರ ಕೊಡಬೇಕಾಗಿ ಬಂತು. ಇದರಿಂದ ಸರ್ಕಾರಕ್ಕೆ 4200 ರೂಪಾಯಿ ನಷ್ಟವಾಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನೇನಾದರೂ ಶ್ರೀ ಲಕ್ಷ್ಮಣದಾಸ್ ಅವರಿಗೆ ಸಹಾಯ ಮಾಡಬೇಕೆಂದು ಮಾಡಿದರೇ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕಾಗಿ ಈ ತಿದ್ದುಪಡಿಯನ್ನು ತರಲಿಲ್ಲ. ಅವರೂ ಸಹ ಅದನ್ನು ತಪ್ಪಿಸಿಕೊಳ್ಳುವುದು ಸರಿಯಾಗಿಲ್ಲ. ಹಿಂದೆ ವಸೂಲು ಮಾಡದೇ ಇದ್ದರೆ ಅದನ್ನು ಈಗ ವಸೂಲು ಮಾಡಬೇಕೆಂದು ಈ ತಿದ್ದುಪಡಿಯನ್ನು ತರುತ್ತಿದ್ದೇವೆ.

ಇನ್ನೊಂದು ವಿಚಾರವನ್ನು ಹೇಳಿದರು. ಎಲ್ಲಾ ವಾಹನಗಳು ಈ ರೀತಿ ತೆರಿಗೆ ಕೊಡಬೇಕಾಗಿದೆಯೇ ಎಂದು. ಅದು ಸರಿಯಲ್ಲ. ನಮ್ಮ ಅಂದಾಜಿನಲ್ಲಿ 15 ಸಾವಿರ ವಾಹನಗಳಿವೆ. ಅವು ಸುಮಾರು 12,500 ಕೆ. ಜಿ. ಗಿಂತ ಹೆಚ್ಚು ಭಾರವನ್ನು ಸಾಗಾಣಿಕೆ ಮಾಡತಕ್ಕ ವಾಹನಗಳಾಗಿವೆ. ಅಂದಮೇಲೆ ಈಗ 15000 ವಾಹನಗಳು 12,500 ಕೆ. ಜಿ. ಗಿಂತ ಹೆಚ್ಚಿಗೆ ಸಾಮಾನುಗಳನ್ನು ಸಾಗಾಣಿಕೆ ಮಾಡುತ್ತಿವೆ ಎಂಬುದನ್ನು ಈ ಮಾನ್ಯ ಸಭೆಯಗಮನಕ್ಕೆ ತರುತ್ತಿದ್ದೇನೆ. ಮಾಲೀಕರೆಲ್ಲರೂ ಹೆಚ್ಚು ತೆರಿಗೆಯನ್ನು ಕೊಡಬೇಕಾಗಿಲ್ಲ. Heavy lorry ಗಳನ್ನು ಇಟ್ಟುಕೊಂಡಿದ್ದವರು ಮಾತ್ರ ಇದನ್ನು ಕೊಡಬೇಕು. ಇದುವರೆಗೆ ಕಾನೂನಿನಲ್ಲ ಏನು ವಿಧಾಯಕಮಾಡಿದ್ದರು ಅಂದರೆ, ಯಾವುದೇ ವಾಹನವಾಗಿದ್ದರೂ ore carrying lorries ಬಿಟ್ಟು ಸಂಸ್ಥಾನಾಮಳೆ ಯಾವ ರಸ್ತೆಗಳಲ್ಲಯೇ ಆಗಲೀ 12 ಸಾವಿರ ಟನ್ನುಗಳುಗಿಂತ ಹೆಚ್ಚು ತೆಗೆದುಕೊಂಡು ಹೋಗಬಹುದು, ಹೆಚ್ಚು ಸಾಮಾನುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಈಗ ನ್ಯಾಷನಲ್ ಹೈವೆ ರಸ್ತೆಗಳಲ್ಲ 15 ಸಾವಿರ ಟನ್ನುಗಳಷ್ಟು ಸಾಮಾನುಗಳನ್ನು carry ಮಾಡಬಹುದೆಂದಿದೆ. ಹೆಚ್ಚು ರಾಭವನ್ನು ಪಡೆಯುತ್ತಿದ್ದರೆ ಅಂತಹವರಿಂದ ಬಾಡಿಗೆಯಲ್ಲಿ ಸ್ವಲ್ಪ ಅಂಶವನ್ನು ತೆಗೆದುಕೊಳ್ಳುತ್ತಿದ್ದೇವೆ. ಅವುಗಳ ಒಂದು ಕ್ವಾರ್ಟರಿಗೆ 100 ರೂಪಾಯಿ ಹೆಚ್ಚಿಗೆ ಕೊಡಬೇಕಾಗುತ್ತದೆ ಅದೇನೂ ದೊಡ್ಡಪ್ರಮಾಣದ ಏರಿಕೆಯಾಗುವುದಿಲ್ಲ. ಇದನ್ನು ಕೆಲವೇ ಜನರು ಕೊಡಬೇಕಾಗುತ್ತದೆ ಇದು ಎಲ್ಲಾ ದೃಷ್ಟಿಯಿಂದ ಸಾಧುವಾಗಿದೆ. ಎಲ್ಲರೂ ಒಪ್ಪಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

4-30 P.M.

Mr. SPEAKER.—The question is:

"That the Mysore Motor Vehicles Taxation (Amendment) Bill, 1966 be taken into consideration."

The motion was adopted

CLAUSES

Mr. SPEAKER.—The question is:

"That clause 2 stand part of the Bill."

The motion was adopted

Clause 2 was added to the Bill.

Mr. SPEAKER.—The question is:

"That clause 1, the Title and the Preamble stand part of the Bill."

The motion was adopted

Clause 1, the Title and the Preamble were added to the Bill.

Motion to pass

Sri D. DEVARAJ URS.—I beg to move:

"That the Mysore Motor Vehicles Taxation (Amendment) Bill, 1966, be passed."

Mr. SPEAKER.—The question is:

"That the Mysore Motor Vehicles Taxation (Amendment) Bill, 1966, be passed"

The motion was adopted.

MERCARA MUNICIPALITIES (PERFORMANCE OF FUNCTIONS BY THE EX-PRESIDENT) VALIDATION BILL, 1966.

Motion to consider.

Sri D. DEVARAJ URS (Minister for Transport and Tourism).—I beg to move:

"That the Mercara Municipalities (Performance of Functions by the Ex-President) Validation Bill, 1966, be taken into consideration."